Swabhimani Sahakari

Pages - 24, ₹12

Volume -14

Issue - 04

April - 2017

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ
ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

5

ರಾಮ ಎಂಬುವ ಎರಡು ಅಕ್ಷರದ ಮಹಿಮೆಯನು
ಪಾಮರರು ತಾವೇನು ಬಲ್ಲರಯ್ಯ

– ಪುರಂದರ ದಾಸ

9

ಅವಿದ್ಯೆಯಿಂದ ಆಸೆಗಳು, ಆಸೆಗಳಿಂದಾಗಿ ಕರ್ಮಗಳು, ಕರ್ಮಗಳಿಂದಾಗಿ ಜೀವದಲ್ಲಿ ದುಃಖ, ದುಃಖದಿಂದಾಗಿ ಮೃತ್ಯು, ಮೃತ್ಯುವಿನ ನಂತರ ಜನ್ಮ, ಮತ್ತೆ ಆಸೆ, ಮತ್ತೆ ಪಾಪಕೃತ್ಯ, ಮತ್ತೆ ದುಃಖ – ಈ ವಿಷವರ್ತುಲದಲ್ಲಿ ನಾವು ಸಂಕಟಪಡುತ್ತಿದ್ದರೂ, 'ಬಹಳ ಚೆನ್ನಾಗಿದ್ದೇವೆ' ಎಂದು ಭಾವಿಸುತ್ತೇವೆ.

– ಮಹಾವೀರ

14

ಮನುಷ್ಯ ಚಿರಂಜೀವಿ ಆಗಲಾರ ಆದರೆ, ಆತನ ಚಿಂತನೆಗಳು ಉಳಿಯುತ್ತವೆ.

– ಡಾ. ಬಿಆರ್. ಅಂಬೇಡ್ಕರ್

29

ಇವನಾರವ ಇವನಾರವ ಇವನಾರವ ನೆಂದಿನಸದಿರಯ್ಯಾ
ಇವ ನಮ್ಮವ ಇವ ನಮ್ಮವ ಇವ ನಮ್ಮವ ನೆಂದಿನಸಯ್ಯಾ
ಕೂಡಲಸಂಗಮದೇವಾ ನಿಮ್ಮ ಮಹಾಮನೆಯ
ಮಗನೆಂದೆನಿಸಯ್ಯ. – ಬಸವಣ್ಣ

30

ಆತ್ಮ ಹಾಗೂ ಪರಮಾತ್ಮ ಒಂದೇ ತತ್ತ್ವಮಸಿ
ಅದು ನೀನೆ ಆಗಿದ್ದೀಯ. – ಆದಿ ಶಂಕರಾಚಾರ್ಯ











**ಮಹಾಪುರಷರ ಜನ್ಮದಿನದ ಹಾರ್ದಿಕ ಶುಭಾಶಯಗಳು**

ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು

ಸೌಹಾರ್ದ ಸಹಕಾರಿಗಳ ಸಂಖ್ಯೆ : 3985 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1023



> ಕೇಂದ್ರ ಸರಕಾರ ಕಳೆದ ವರ್ಷ ನವೆಂಬರ್ ಮಾಹೆಯಲ್ಲಿ ರೂ.500 ಹಾಗೂ ರೂ.1000 ನೋಟು ಅಮಾನ್ಯ ಮಾಡಿದಾಗ ನೋಟುಗಳ ವಿನಿಮಯ ಹಾಗೂ ನಗದು ವಹಿವಾಟು ಸಂದರ್ಭದಲ್ಲಿ ಸಹಕಾರಿಗಳನ್ನು ಒಬ್ಬ ವ್ಯಕ್ತಿಯಂತೆ ಪರಿಗಣಿಸಿ, ಸಹಕಾರಿ ಕ್ಷೇತ್ರದ ಅಸ್ತಿತ್ವವೇ ಒಂದು ಸವಾಲಾಗಿ ಪರಿಣಮಿಸಿದಾಗ ಸಹಕಾರಿಗಳು ಧೃತಿಗೆಡದೇ ಸವಾಲನ್ನು ಸ್ವೀಕರಿಸಿ, ಮತ್ತೆ ತಲೆ ಎತ್ತಿ ನಿಂತಿರುವುದು ಅಭಿನಂದನೀಯ.

# ಹೊಸ ಆರ್ಥಿಕ ವರ್ಷ - ಹೊಸ ಸವಾಲುಗಳ ಸ್ವೀಕಾರ - ಹೊಸ ಅವಕಾಶಗಳ ಅನ್ವೇಷಣೆಯ ಪರ್ವ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ನವ ಸಂವತ್ಸರ "ಹೇಮಲಂಬಿ", ಶ್ರೀರಾಮನವಮಿ, ಮಹಾವೀರ ಜಯಂತಿ, ಅಂಬೇಡ್ಕರ ಜಯಂತಿ, ಗುಡ್ ಫ್ರೈಡೇ, ಅಕ್ಷಯ ತದಿಗೆ, ಬಸವೇಶ್ವರ ಜಯಂತಿ ಹಾಗೂ ಶಂಕರ ಜಯಂತಿ ಶುಭದಿನಾಚರಣೆಗಳ ಹಾರ್ದಿಕ ಶುಭಾಷಯಗಳು. ಹೊಸ ಆರ್ಥಿಕ ವರ್ಷದ ಪ್ರಾರಂಭವು ಹೆಚ್ಚಿನ ಶ್ರೇಯಸ್ಸನ್ನು ತಂದುಕೊಡಲಿ ಎಂದು ಹಾರೈಸುತ್ತೇನೆ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಪ್ರಾರಂಭವಾಗಿ 16 ವರ್ಷಗಳು ಕಳೆದಿವೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ 4000ದ ಸನಿಹದಲ್ಲಿದೆ. ಸೌಹಾರ್ದ ಸಹಕಾರಿ ಕ್ಷೇತ್ರ ವಿವಿಧ ಆಯಾಮಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿ 1959ರ ಕಾಯ್ದೆಯಲ್ಲಿನ ಸಹಕಾರ ಸಂಸ್ಥೆಗಳಿಗೆ ಸಹಕಾರದ ಎಲ್ಲೆಯನ್ನು ಮೀರಿ ಕೆಲಸ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿದೆ ಮತ್ತು ಅವರಲ್ಲಿ ಹೊಸ ಉತ್ಸಾಹ ತುಂಬುವಲ್ಲಿ ಯಶಸ್ವಿಯಾಗಿದೆ ಹೀಗಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ತೃಪ್ತಿದಾಯಕ ಎಂದು ಸರಕಾರ, ಸಹಕಾರಿಗಳು ಹಾಗೂ ಸಾರ್ವಜನಿಕರ ಹಂತದಲ್ಲಿ ನಡೆಯುತ್ತಿರುವ ಚರ್ಚೆಗಳ ಮೂಲಕ ತಿಳಿಯಬಹುದಾಗಿದೆ.

01 ಏಪ್ರಿಲ್ 2017ರಿಂದ ಹೊಸ ಆರ್ಥಿಕ ವರ್ಷ ಪ್ರಾರಂಭವಾಗಿದೆ. ಕಳೆದ ವರ್ಷದ ಹಣಕಾಸಿನ ಸ್ಪಷ್ಟ ಚಿತ್ರಣ ದೊರೆತಿದೆ. ಗಳಿಸಿದ ಲಾಭ, ಸದಸ್ಯರ ಬೇಕು ಬೇಡಿಕೆಗಳಿಗೆ ಹಾಗೂ ಸಹಕಾರಿಯ ಕಾರ್ಯಚಟುವಟಿಕೆಗಳಲ್ಲಿ ಪೂರೈಸಿರುವುದು ಹಾಗೂ ಪೂರೈಸದಿರುವುದು, ಇವುಗಳ ಆಧಾರದ ಮೇಲೆ ಮುಂಬರುವ ವರ್ಷದ ಕ್ರಿಯಾ ಯೋಜನೆ ಜಾರಿಗೆ ಅನುಷ್ಠಾನದ ಹಂತಗಳು, ಸ್ವಾಭಾವಿಕ ಸಂಪನ್ಮೂಲಗಳ ಸದುಪಯೋಗ, ಆರ್ಥಿಕ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಚಾಲನೆ ನೀಡುವುದು, ಮಾನವ ಸಂಪನ್ಮೂಲಗಳ ಸದ್ಬಳಕೆಗೆ ಯೋಜನೆ, ವೈಜ್ಞಾನಿಕವಾಗಿ ಆಯ-ವ್ಯಯ ಸಿದ್ಧಪಡಿಸುವುದು ಮತ್ತು ಕಾರ್ಯಗತಗೊಳಿಸಲು ಕ್ರಿಯಾಯೋಜನೆ, ಸಹಕಾರ ಕ್ಷೇತ್ರಕ್ಕೆ ಖಾಸಗಿ ವಲಯದ ಪೈಪೋಟಿ ಇವುಗಳ ಸ್ಪಷ್ಟ ಚಿತ್ರಣವೂ ದೊರೆತಿದೆ.

ಇವೆಲ್ಲ ಸವಾಲುಗಳ ಜೊತೆಗೆ ಕೇಂದ್ರ ಸರಕಾರ ಕಳೆದ ವರ್ಷ ನವೆಂಬರ್ ಮಾಹೆಯಲ್ಲಿ ರೂ.500 ಹಾಗೂ ರೂ.1000 ನೋಟು ಅಮಾನ್ಯ ಮಾಡಿದಾಗ ನೋಟುಗಳ ವಿನಿಮಯ ಹಾಗೂ ನಗದು ವಹಿವಾಟು ಸಂದರ್ಭದಲ್ಲಿ ಸಹಕಾರಿಗಳನ್ನು ಒಬ್ಬ ವ್ಯಕ್ತಿಯಂತೆ ಪರಿಗಣಿಸಿ, ಸಹಕಾರ ಕ್ಷೇತ್ರದ ಅಸ್ತಿತ್ವವೇ ಒಂದು ಸವಾಲಾಗಿ ಪರಿಣಮಿಸಿದಾಗ ಸಹಕಾರಿಗಳು ಧೃತಿಗೆಡದೇ ಸವಾಲನ್ನು ಸ್ವೀಕರಿಸಿ, ಮತ್ತೆ ತಲೆ ಎತ್ತಿ ನಿಂತಿರುವುದು ಅಭಿನಂದನೀಯ. ಇವೆಲ್ಲಾ ಸವಾಲುಗಳನ್ನು ಮೆಟ್ಟಿ ಅವಕಾಶಗಳ ಅನ್ವೇಷಣೆಯಾಗಬೇಕಿದೆ.

ಸಹಕಾರ ಕ್ಷೇತ್ರ ಕಾರ್ಯನಿರ್ವಹಿಸಬಹುದಾದ ಹೊಸ ಕ್ಷೇತ್ರಗಳ ಅನ್ವೇಷಣೆ, ಸಹಕಾರ ಕ್ಷೇತ್ರಕ್ಕೆ ಹೊಸಬರನ್ನು ಪರಿಚಯಿಸಿ ನಮ್ಮ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವುದು, ಸದಸ್ಯರಿಗೆ ಹಾಗೂ ಸಾರ್ವಜನಿಕರ ಅನುಕೂಲಗಳನ್ನು ಪಟ್ಟಿ ಮಾಡಿ ಅವುಗಳನ್ನು ಪೂರೈಸುವ ಬಗ್ಗೆ ಕ್ರಿಯಾ ಯೋಜನೆ ಸಿದ್ಧಪಡಿಸುವುದು, ಕಾರ್ಪೋರೇಟ್ ಪದ್ಧತಿಯ ಆಡಳಿತ ನಿರ್ವಹಣೆ, ನಿರಂತರ ಜನಸಂಪರ್ಕ, ಜನಮನದಲ್ಲಿ ಮಿಡಿಯುವ ಸಹಕಾರಿ ಚಟುವಟಿಕೆಗಳಿಂದ ಸದಸ್ಯರ ಪಾಲುಗಾರಿಕೆಯನ್ನು ಹೆಚ್ಚಿಸುವಂತಹ ಅವಕಾಶಗಳ ಅನ್ವೇಷಣೆ ಹಾಗೂ ಅವುಗಳನ್ನು ಬಗ್ಗೆ ಕ್ರಿಯಾ ಯೋಜನೆ ಸಿದ್ಧಪಡಿಸುವ ಕಾರ್ಯಕ್ರಮಗಳನ್ನು ಜಾರಿ ಮಾಡುವ ಪ್ರಕ್ರಿಯೆ ಆರಂಭವಾಗಬೇಕಿದೆ. ನೂತನ ಆರ್ಥಿಕ ವರ್ಷದಲ್ಲಿ ಸಹಕಾರಿಗಳಿಗೆಲ್ಲಾ ಹೊಸ ಚೈತನ್ಯ ಬರಲಿ ಎಂದು ಆಶಿಸುತ್ತೇನೆ.

ಸಹಕಾರಿಗಳು ತಾವು ಜಾರಿ ಮಾಡಬಹುದಾದ ನೂತನ ಯೋಜನೆಗಳ ಬಗ್ಗೆ ಸಂಯುಕ್ತ ಸಹಕಾರಿಯೊಂದಿಗೆ ಹಂಚಿಕೊಂಡಲ್ಲಿ ಬೇರೆ ಸೌಹಾರ್ದ ಸಹಕಾರಿಗಳಿಗೂ ಅಧಿಪ್ರೇರಣೆಯಾಗುತ್ತದೆ ಹಾಗೂ ಅವರಿಗೂ ನೀಡಲು ಸಾಧ್ಯವಾಗುತ್ತದೆ. ನಾವು ಬೆಳೆಯುವುದರೊಂದಿಗೆ ಇತರರೂ ಬೆಳೆಯಲು ಅವಕಾಶವಾಗುತ್ತದೆ. ಈ ಬಗ್ಗೆ ಸಹಕಾರಿಗಳ ವಿಚಾರ, ಸಲಹೆ ಹಾಗೂ ಮಾರ್ಗದರ್ಶನಗಳನ್ನು ಸ್ವಾಗತಿಸುತ್ತೇನೆ.

**ಹೆಚ್.ವಿ.ರಾಜೀವ,** ಉಪಾಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಹೆಚ್.ವಿ.ರಾಜೀವ**
ಗೌರವ ಅಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು



**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ : 080–23378375–80, 23474408, 23573291
ಇ–ಮೇಲ್ : souharda@souharda.coop
ವೆಬ್‌ಸೈಟ್ : www.souharda.coop


## ಒಳ ಪುಟಗಳಲ್ಲಿ . . .


ಜ್ಞಾನ ಜ್ಯೋತಿ ........ 4

ಮೈಸೂರು ವಿಶ್ವವಿದ್ಯಾಲಯದಿಂದ ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಮೌಲ್ಯಮಾಪನ : ಅಂತಿಮ ವರದಿ ಸಲ್ಲಿಕೆ ........ 5

ಸೌಹಾರ್ದ ಸಹಕಾರಿಗಳಲ್ಲಿ ಇ–ಸ್ಟ್ಯಾಂಪಿಂಗ್ ಕೇಂದ್ರಗಳನ್ನು ನಡೆಸುತ್ತಿರುವ ಎಸಿಸಿ ಕೇಂದ್ರಗಳ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮಗಳು ........ 8

ದಿನಾಂಕ 31.03.2017ಕ್ಕೆ ಅಂತ್ಯಗೊಂಡಿರುವ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ/ ಬ್ಯಾಂಕುಗಳ ಆರ್ಥಿಕ ಪ್ರಗತಿಯ ಅಂಕಿ ಅಂಶಗಳ ವಿವರಗಳು ... 13

ಸಹಕಾರಿಗಳಿಗೆ ಅನ್ವಯಿಸುವಂತೆ ದಿನಾಂಕ : 01–04–2017ರಿಂದ ಆಗಿರುವ ಬದಲಾವಣೆಗಳು ........ 15

ಗ್ರಾಹಕ ದೇವೋಭವ...! ಸಹಕಾರಿಗಳಲ್ಲಿ... ಗ್ರಾಹಕ ಸಂಬಂಧಗಳ ನಿರ್ವಹಣೆ ........ 18

ವಾರ್ಷಿಕ ಸಾಮಾನ್ಯ ಸಭೆ (ಸರ್ವ ಸದಸ್ಯರ ಸಭೆ) ....... 21

ಆರ್‌ಬಿಐ ನ್ಯೂಸ್ ........ 22


# ಸಂಪಾದಕೀಯ

## "ಇ"-ಸ್ಟ್ಯಾಂಪಿಂಗ್ ಕೇಂದ್ರಗಳ ಗುಣಮಟ್ಟ ನಿರ್ವಹಣೆಗೆ ಪರಿಣಾಮಕಾರಿ ತರಬೇತಿ

ಸಹಕಾರ ಕ್ಷೇತ್ರದಲ್ಲಿಯೇ "ಇ"–ಸ್ಟ್ಯಾಂಪಿಂಗ್ ವ್ಯವಹಾರವನ್ನು ಮೊಟ್ಟಮೊದಲು ಪ್ರಾರಂಭಿಸಿದ ಹೆಮ್ಮೆ ಸೌಹಾರ್ದ ಸಹಕಾರಿಗಳಿಗಿದೆ. ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದವರು ರಾಜ್ಯದಲ್ಲಿ ವಿವಿಧ ಸಹಕಾರಿ ಸಂಸ್ಥೆಗಳ ಮೂಲಕ ಒಟ್ಟಾರೆ ನೀಡಿರುವ 3000 ಇ–ಸ್ಟ್ಯಾಂಪಿಂಗ್ ಕೇಂದ್ರಗಳಲ್ಲಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದಾದ್ಯಂತ ಸೌಹಾರ್ದ ಸಹಕಾರಿಗಳು ನಿರ್ವಹಿಸುವ ಇ–ಸ್ಟ್ಯಾಂಪಿಂಗ್ ಕೇಂದ್ರಗಳ ಸಂಖ್ಯೆ 1023. ರಾಜ್ಯದ ಬೊಕ್ಕಸಕ್ಕೆ ಪ್ರತಿದಿನ ರೂ. 1.00 ಕೋಟಿಗಿಂತಲೂ ಹೆಚ್ಚು ರಾಜಸ್ವವನ್ನು ಈ ಸೌಹಾರ್ದ ಸಹಕಾರಿ ಕ್ಷೇತ್ರ ಸಂಗ್ರಹಿಸಿ ಕೊಡುತ್ತಿದೆ.

ಸೌಹಾರ್ದ ಸಹಕಾರಿಗಳು ನಿರ್ವಹಿಸುತ್ತಿರುವ ಇ–ಸ್ಟ್ಯಾಂಪಿಂಗ್ ಕೇಂದ್ರಗಳ ನಿರ್ವಹಣೆ ಉತ್ತಮ ಗುಣಮಟ್ಟದ್ದಾಗಿರಬೇಕು. ಸಾರ್ವಜನಿಕರಿಂದ, ಸರಕಾರದಿಂದ ಯಾವುದೇ ರೀತಿಯ ದೂರುಗಳು ಬರದಂತೆ ಎಚ್ಚರ ವಹಿಸಿ ಕಾರ್ಯನಿರ್ವಹಿಸಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ.

ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯು ಇ–ಸ್ಟ್ಯಾಂಪಿಂಗ್ ಕೇಂದ್ರಗಳ ಸಿಬ್ಬಂದಿಯವರಿಗಾಗಿ ರಾಜ್ಯದ 14 ಕೇಂದ್ರಗಳನ್ನು ಆಯ್ಕೆ ಮಾಡಿ, ತರಬೇತಿ ನೀಡಿರುವುದು ತರಬೇತಿಯಲ್ಲಿ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದ ಅಧಿಕಾರಿಗಳು, ಸರಕಾರದ ಮುದ್ರಾಂಕ ಮತ್ತು ನೋಂದಣಿ ಇಲಾಖೆಯ ಅಧಿಕಾರಿಗಳು, ಹೆಚ್. ಪಿ. ಪ್ರಿಂಟರ್ ಮತ್ತು ಕಾಟ್ರೇಜ್ ಕಂಪನಿಯವರು, ಸಂಯುಕ್ತ ಸಹಕಾರಿಯ ಇ–ಸ್ಟಾಂಪಿಂಗ್ ವಿಭಾಗದ ಅಧಿಕಾರಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳು ಭಾಗವಹಿಸಿ, ರಾಜ್ಯದ ಇ–ಸ್ಟಾಂಪಿಂಗ್ ಎಸಿಸಿ ಕೇಂದ್ರಗಳ ಸಿಬ್ಬಂದಿಯವರೊಡನೆ ನೇರವಾಗಿ ವಿಚಾರ ವಿನಿಮಯ ಮಾಡಲು ಅವಕಾಶ ಒದಗಿಸಿರುವುದು ಮತ್ತು ಈ ಕೇಂದ್ರಗಳ ಕಾರ್ಯ ನಿರ್ವಹಣೆಯ ಬಗ್ಗೆ ಸಮಗ್ರ ವಿಷಯಗಳನ್ನು ಸಂಗ್ರಹಿಸಿ, ಮಾಹಿತಿ ಕೈಪಿಡಿ ಸಿದ್ಧಪಡಿಸಿ ಎಲ್ಲಾ ಎಸಿಸಿ ಕೇಂದ್ರಗಳಿಗೆ ಉಚಿತವಾಗಿ ವಿತರಿಸಿರುವುದು ಅಭಿನಂದನಾರ್ಹವಾದುದು. ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ಅಧಿಕಾರಿಗಳೆಲ್ಲಾ ಸಂಯುಕ್ತ ಸಹಕಾರಿಯ ಈ ಪ್ರಯತ್ನವನ್ನು ಶ್ಲಾಘಿಸಿದ್ದಾರೆ ಮತ್ತು ಇಂತಹ ಪ್ರಯತ್ನವನ್ನು ಪ್ರತಿ ವರ್ಷ ಕಡ್ಡಾಯವಾಗಿ ನಿರ್ವಹಿಸಬೇಕು ಎಂದು ತಿಳಿಸಿರುವುದು ಸ್ವಾಗತಾರ್ಹ. ಇದು ಸರಕಾರ ಮತ್ತು ಸಂಬಂಧಿಸಿದವರೊಡನೆ ಉತ್ತಮ ಬಾಂಧವ್ಯ ವೃದ್ಧಿಗೆ ಸಹಕಾರಿ.

ಮಾರ್ಚ್ ಮಾಹೆಯಲ್ಲಿ ನಡೆದ ಒಟ್ಟಾರೆ 14 ತರಬೇತಿಗಳಿಂದ ಭಾಗವಹಿಸಬೇಕಾದ 998 ಇ–ಸ್ಟ್ಯಾಂಪಿಂಗ್ ಕೇಂದ್ರಗಳ ಪೈಕಿ 642 ಇ–ಸ್ಟ್ಯಾಂಪಿಂಗ್ ಕೇಂದ್ರಗಳಿಂದ 942 ಸಿಬ್ಬಂದಿಗಳು ತರಬೇತಿ ಪಡೆದಿರುವುದು ಸಮಾಧಾನಕರವಾಗಿದ್ದರೂ ತರಬೇತಿ ಪಡೆಯದೇ ಉಳಿದವರ ಸಂಖ್ಯೆ 356 ಇದೆ. ಸೌಹಾರ್ದ ಸಹಕಾರಿಗಳು ಇಂತಹ ಅವಕಾಶವನ್ನು ಕಳೆದುಕೊಳ್ಳುವುದು ಸರಿಯಲ್ಲ. ಇದರಿಂದ ಎಸಿಸಿ ಕೇಂದ್ರಗಳ ಕಾರ್ಯನಿರ್ವಹಣೆಯ ಗುಣಮಟ್ಟ ನಿರೀಕ್ಷಿಸಿದ ಮಟ್ಟದಲ್ಲಿರಲು ಸಾಧ್ಯವಾಗುವುದಿಲ್ಲ.

ನಕಾರಾತ್ಮ ಭಾವನೆಗಳನ್ನು ತೊರೆದು ತರಬೇತಿ ಕಾರ್ಯಕ್ರಮಗಳಲ್ಲಿ ತಪ್ಪದೇ ಭಾಗವಹಿಸುವುದು, ಪ್ರಯೋಜನ ಪಡೆಯುವುದು, ಸಕಾರಾತ್ಮಕ ಚಿಂತನೆಗಳನ್ನು ರೂಢಿಸಿಕೊಂಡು ಅಭಿವೃದ್ಧಿ ಪಥದತ್ತ ಸಾಗಬೇಕಿದೆ. ■



## ಜ್ಞಾನ ಜ್ಯೋತಿ

ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

### ಬದುಕಿನ ಗೆಲುವು

ವಸ್ತುಗಳಲ್ಲಿ ಚಲನೆ ಇದೆ, ಆ ಚಲನೆ ವಸ್ತುವಿನಲ್ಲಿ ನೇರವಾಗಿ ಇರಬಹುದು ಅಥವಾ ಇನ್ನೊಂದು ವಸ್ತುವಿನ ಪರಿಣಾಮವಾಗಿ ಇರಹುದು. ಒಂದು ವಸ್ತುವನ್ನು ನಾನೀಗ ತೆಗೆದಿಡುತ್ತೇನೆ. ಇಲ್ಲಿ ಚಲನೆ ಕಾಣಬಂತು. ಈ ಚಲನೆ ಅದರದ್ದಲ್ಲ, ನಾನು ಈ ಚಲನೆಗೆ ಕಾರಣನಾದೆ. ನಾನೇ ಚಲಿಸಿದರೆ, ಆ ಚಲನೆಗೆ ಯಾರೂ ಕಾರಣರಲ್ಲ. ನಾನೇ ಕಾರಣ. ಇಲ್ಲಿ ಒಂದು Magnet ಇದೆ. ಒಂದಿಷ್ಟು ಕಬ್ಬಿಣದ ಚೂರು ಇದೆ. ಕಬ್ಬಿಣದ ಚೂರುಗಳು Magnetಗೆ ಹಿಡಿಯುತ್ತವೆ. ಇಲ್ಲಿಯ ಚಲನೆಗೆ ಹೊರಗಿನ ವಸ್ತು ಕಾರಣವಾಯಿತು. ಚಲನೆಗೆ ಮುಖ್ಯವಾಗಿ ಎರಡು ಕಾರಣಗಳು. ಒಂದು ತಾನೇ ಕಾರಣ, ಇನ್ನೊಂದು ಪರಿಣಾಮ. ಅವುಗಳನ್ನು 1. ಸ್ವಯಂ ಚಲನೆ 2. ಪರಪ್ರೇರಿತ ಚಲನೆ ಎಂದು ಕರೆಯಲಾಗುತ್ತದೆ.

ಸ್ವಯಂ ಚಲನೆಗೆ ಸ್ವ ಇಚ್ಛೆ ಇರುತ್ತದೆ. ನೀರು ಹರಿಯುತ್ತದೆ ಸ್ವ ಇಚ್ಛೆಯಿಂದಲ್ಲ, ಭೂಮಿಯ ಕಾರಣದಿಂದಾಗಿ ಚಲಿಸುತ್ತದೆ. ತನ್ನ ಸಮತೋಲನ ಕಾಪಾಡಲು ನೀರು ಚಲಿಸುತ್ತದೆ. ಪ್ರಾಣಿಗಳ ಚಲನೆಗೆ ಇಚ್ಛೆ ಕಾರಣವಾಗುತ್ತದೆ. ಈಗ ಒಂದು ಹೂವು ನೋಡುತ್ತೇನೆ, ಬೇಕು ಅನಿಸಿ ಹೋಗುತ್ತೇನೆ, ಚಲಿಸುತ್ತೇನೆ. ಇಲ್ಲಿ 'ಇಚ್ಛೆ'ಗೆ ಕಾರಣವಾದದ್ದು ಹೂವು. ಹೂವು ಚಲನೆಗೆ ಕಾರಣವಾಯಿತು. ಹೀಗೆ ಮನಸ್ಸು ಇಚ್ಛೆ ಪಟ್ಟು, ಇಲ್ಲವೇ ಪ್ರಭಾವಕ್ಕೆ ಒಳಗಾಗಿ ಚಲಿಸುತ್ತದೆ. ಪರಪ್ರೇರಣೆಯಿಂದ ಚಲಿಸಿದರೆ ಮನಸ್ಸು ಸೋಲುತ್ತದೆ. ಬಯಸುವುದು ದುರ್ಬಲ ಮನಸ್ಸು. ಮನಸ್ಸು ಅಶಕ್ತ ಇದ್ದರೆ... ಸೋಲುತ್ತದೆ. ಸಶಕ್ತ ಇದ್ದರೆ... ಸ್ವಯಂ ಚಲಿಸುತ್ತದೆ.

ಮನಸ್ಸು ಬಹಳ ಸೂಕ್ಷ್ಮ. ವಸ್ತುವಿನತ್ತ ಬೇಗ ಚಲಿಸುತ್ತದೆ, ಜಾರುತ್ತದೆ, ಆಕರ್ಷಿಸುತ್ತದೆ. ಜಡ ವಸ್ತುಗಳು ಚಲಿಸುವುದು ವಿರಳ. ಇಂಗ್ಲೆಂಡ್ ದೇಶದ ಬಹುದೊಡ್ಡ ಲೇಖಕ 'ಉಲ್ಫ್' ಹೇಳುತ್ತಾನೆ... Mind is the most compress insect, It flit and flatter. ಮನಸ್ಸು ಹೇಗಿದೆ ಅಂದರೆ ಅತ್ಯಂತ ಚಂಚಲವಾದ ಕೀಟ ಇದ್ದಂತೆ. ಪಾತರಗಿತ್ತಿ, ಚಿಟ್ಟೆ, ಅದರ ಬಣ್ಣ ಸುಂದರ, ಅದರ ಪಕ್ಕಗಳು ಎಷ್ಟು ಅಂದ? ಅದು ಒಂದು ಹೂವಿನ ಮೇಲೆ ಕೂರುವುದಿಲ್ಲ, ಸಾವಿರ... ಸಾವಿರ ಹೂಗಳನ್ನು ಸ್ಪರ್ಶಿಸುತ್ತದೆ. ಹಾಗೇ ಮನಸ್ಸು ಒಂದು ಕ್ಷಣ ಕೂರೋದು ಕಷ್ಟ. ಅದು ಚಿಟ್ಟೆ ಇದ್ದಂತೆ. ಇದು ಅಚ್ಚರಿ, ಅದ್ಭುತ ಮನಸ್ಸು. ಅದು ನಮ್ಮ ಗೆಲುವಿಗೆ ಇಲ್ಲವೇ ಸೋಲಿಗೆ ಕಾರಣವಾಗುತ್ತದೆ. ದುರ್ಬಲ ಮನಸ್ಸು ಸೋಲುತ್ತದೆ. ಸಬಲ ಮನಸ್ಸು ಗೆಲ್ಲುತ್ತದೆ. ಭೌತಿಕ ವಸ್ತುಗಳನ್ನು ನೋಡಿದರೆ ಮನಸ್ಸು ಸೋಲಬಾರದು.

ಬದುಕು ಗಟ್ಟಿಯಾಗಬೇಕಾದರೆ ಮನಸ್ಸು ಗಟ್ಟಿಯಾಗಬೇಕು. ಮನಸ್ಸು ಗಟ್ಟಿಗೊಳಿಸಿ. ಸುಖ ಇರುತ್ತದೆ. ಇದನ್ನು ಅಭ್ಯಾಸ ಮಾಡಬೇಕು. ಇದೇ ಸಾಧನೆ... ಇದೇ ಯೋಗ. ಈ ಅಭ್ಯಾಸಕ್ಕೆ ಎರಡು ಸಂಗತಿಗಳು ಬೇಕಾಗುತ್ತದೆ. 1. ಸತ್ಸಂಗ, 2. ಸ್ವ ಅಧ್ಯಯನ. ಮನಸ್ಸನ್ನು ಸಬಲಗೊಳಿಸಲು ಇವು ಎರಡು ಅಗತ್ಯ.

**ಸತ್ಸಂಗ** – ನೀವೀಗ ಇಲ್ಲಿ ಕುಳಿತಿದ್ದೀರಿ... ನಿಮ್ಮ ಮನಸ್ಸು ಅತ್ತ ಇತ್ತ ಹರಿದಾಡುತ್ತಿರುತ್ತದೆ. ಅದನ್ನು ತಡೆಯೋದು ಬಹಳ ಕಷ್ಟ. ನಿವೀಗ ಸತ್ಸಂಗದಲ್ಲಿದ್ದೀರಿ, ಅದನ್ನು ತಡೆಯುವ ಪ್ರಯತ್ನದಲ್ಲಿದ್ದೀರಿ, ಇದರಿಂದ ಮನಸ್ಸು ಆನಂದ ಪಡುತ್ತದೆ.

**ಸ್ವ ಅಧ್ಯಯನ** – ಬಲ್ಲವರ ಮಾತುಗಳು ಶಬ್ದದಲ್ಲಿರುತ್ತವೆ. ಅವು ಬೆಳಕನ್ನು ತೋರುತ್ತಿರುತ್ತವೆ. ಅವನ್ನು ಮೂಡಿಸಿಕೊಳ್ಳುವುದು. ಇವೆರಡರಿಂದ ಮನಸ್ಸು ಗಟ್ಟಿಯಾಗುತ್ತದೆ, ಸಬಲಗೊಳ್ಳುತ್ತದೆ, ಸಶಕ್ತವಾಗುತ್ತದೆ. ಬಲ್ಲವರ ಮಾತುಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು. ಪ್ರಸಂಗ ಬಂದಾಗ ಅವು ರಕ್ಷಿಸುತ್ತವೆ. ಬದುಕನ್ನು ಅಸ್ತವ್ಯಸ್ತಗೊಳಿಸುವ ಸಂಗತಿಗಳನ್ನು ಮರೆಯುವುದು, ಸತ್ಸಂಗವನ್ನು ಅನುಭವಿಸುವುದು, ಬದುಕಿನ ಉದ್ದಕ್ಕೂ ಸಂಪೂರ್ಣ ಶಾಂತಿಯನ್ನು ಅನುಭವಿಸುವುದು 'ಭಕ್ತಿಯೋಗ'ದ ಉದ್ದೇಶ.


## ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು

**ಹೈಯರ್ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ (ಹೆಚ್.ಡಿ.ಸಿ.ಎಂ.) (ಕರೆಸ್ಪಾಂಡೆನ್ಸ್ ಕೋರ್ಸ್) 7ನೇ ಅಧಿವೇಶನ**

ಈ ಕೋರ್ಸ್‌ನ ಉದ್ದೇಶ ಸಹಕಾರ ಅಭಿವೃದ್ಧಿ ಹಾಗೂ ಸಿಬ್ಬಂದಿಯಲ್ಲಿರುವ ಸಾಮರ್ಥ್ಯವನ್ನು ಹೆಚ್ಚಿಸುವುದು, ಸಹಕಾರ ನಿರ್ವಹಣೆ ಮತ್ತು ಆಡಳಿತ ಉತ್ಕೃಷ್ಟತೆಯನ್ನು ಕಾಪಾಡುವುದು. ಕೋರ್ಸ್‌ನ ಅವಧಿಯು ದಿನಾಂಕ 03.05.2017 ರಿಂದ 30.10.2017ರವರೆಗೆ 26 ವಾರಗಳಾಗಿರುತ್ತದೆ. ಕೋರ್ಸ್ ಶುಲ್ಕ ರೂ.10,000/– + ಶೇ.15 ಸೇವಾ ತೆರಿಗೆ ಸೇರಿದಂತೆ ಒಟ್ಟು ರೂ.11,500/–ಗಳನ್ನು ಪಾವತಿಸಬೇಕು. ಸೇರಬಯಸುವವರು ರೂ.200/–ಗಳ ಡಿ.ಡಿ.ಯನ್ನು ಅಥವಾ ನಗದು ರೂಪದಲ್ಲಿ ನಿರ್ದೇಶಕರು, ಪ್ರಾದೇಶಿಕ ಸಹಕಾರಿ ನಿರ್ವಹಣಾ ಸಂಸ್ಥೆ, ಬೆಂಗಳೂರು ಇಲ್ಲಿಗೆ ಪತ್ರ ಮುಖೇನ ಅಥವಾ ಖುದ್ದಾಗಿ ಸಂಪರ್ಕಿಸಿ, ಅರ್ಜಿಯನ್ನು ಪಡೆಯಬಹುದಾಗಿದೆ. ಅರ್ಜಿ ಪಡೆಯಲು ಕೊನೆಯ ದಿನಾಂಕ 20.04.2017.

**ಹೆಚ್ಚಿನ ಮಾಹಿತಿಗಾಗಿ :** ದೂರವಾಣಿ ಸಂಖ್ಯೆ : 080–26692036, ಫ್ಯಾಕ್ಸ್ : 080–26692537 ಅಥವಾ ಕಾರ್ಯಕ್ರಮದ ಸಮನ್ವಾಯಾಧಿಕಾರಿ ಡಾ. ಬಿ.ಕಿಶೋರ್, 9483267268 ಅಥವಾ bkishor1971@gmail.com ಮೂಲಕ ಸಂಪರ್ಕಿಸಬಹುದು.

## ಮೈಸೂರು ವಿಶ್ವವಿದ್ಯಾಲಯದಿಂದ ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಮೌಲ್ಯಮಾಪನ : ವರದಿ ಸಲ್ಲಿಕೆ

### ವರದಿ ವಸ್ತು ನಿಷ್ಠವಾಗಿದೆ. ಸೌಹಾರ್ದ ಸಹಕಾರಿಗಳಿಗೆ ಧೈರ್ಯ, ಉತ್ಸಾಹ ಹಾಗೂ ಅಧಿಕ ಶಕ್ತಿ ತುಂಬಿದೆ - ಶ್ರೀ ಹೆಚ್.ವಿ. ರಾಜೀವ

ಸೌಹಾರ್ದ ಸಹಕಾರಿ ಸಂಸ್ಥೆಗಳು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವ ಅಗತ್ಯತೆ ಇದೆ. ರಾಜ್ಯದಲ್ಲಿ ಹೊಸ ಸೌಹಾರ್ದ ಸಹಕಾರಿಗಳನ್ನು ಹುಟ್ಟುಹಾಕಲು ಮತ್ತು ಸೌಹಾರ್ದ ಸಹಕಾರಿಗಳು ಹೊಸ ಹೊಸ ಯೋಜನೆಗಳನ್ನು ಪ್ರಾರಂಭಿಸಲು ಧೈರ್ಯ ತುಂಬಿದೆ.



ಮೌಲ್ಯಮಾಪನ ವರದಿ ಸಲ್ಲಿಕೆ ಕಾರ್ಯಕ್ರಮದ ಉದ್ಘಾಟನೆ

**ಮೈಸೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಮೌಲ್ಯಮಾಪನ ವರದಿ ಸಲ್ಲಿಕೆ ಸಮಾರಂಭವನ್ನು ಮೈಸೂರಿನಲ್ಲಿ ದಿನಾಂಕ 03 ಏಪ್ರಿಲ್ 2017ರಂದು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ವಹಿಸಿ, ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಂಯುಕ್ತ ಸಹಕಾರಿಯ ಮಾರ್ಗದರ್ಶನದಲ್ಲಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಕಾರ್ಯಾರಂಭಿಸಿ 15 ವರ್ಷಗಳು ಕಳೆದ ನಂತರ ರಾಜ್ಯದ ಸೌಹಾರ್ದ ಸಹಕಾರಿಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ? ಯಾವ ಚಟುವಟಿಕೆಗಳನ್ನು ಹಮ್ಮಿಕೊಂಡಿವೆ? ಈ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಸಹಕಾರಿಗಳ, ಸಾರ್ವಜನಿಕರ ಹಾಗೂ ಸರಕಾರದ ಅಭಿಪ್ರಾಯಗಳೇನು? ಹಾಗೂ ಈ ಸೌಹಾರ್ದ ಸಹಕಾರಿಗಳ ನೇತೃತ್ವ ವಹಿಸಿರುವ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆಯೇ? ಎಂಬ ವಿಷಯಗಳ ಬಗ್ಗೆ ಆತ್ಮಾವಲೋಕನ ಮಾಡುವ ದೃಷ್ಟಿಯಿಂದ ಶಕ್ತಿ ಸಾಮರ್ಥ್ಯಗಳ ಹಾಗೂ ಸವಾಲುಗಳ ಅಧ್ಯಯನ, ಸಾಧನೆಗಳನ್ನು ತಿಳಿಯುವ, ವೈಫಲ್ಯಗಳನ್ನು ಸರಿಪಡಿಸಿಕೊಳ್ಳುವ ದೃಷ್ಟಿಯಿಂದ ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಮೌಲ್ಯಮಾಪನ ಮಾಡಿ ವರದಿ ಸಲ್ಲಿಸಲು ಮೈಸೂರು ವಿಶ್ವವಿದ್ಯಾಲಯಕ್ಕೆ ವಹಿಸಿಕೊಡಲಾಗಿತ್ತು.

ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ತೆಗೆದುಕೊಂಡ ಈ ನಿರ್ಧಾರದಂತೆ ಸಂಯುಕ್ತ ಸಹಕಾರಿಯಿಂದ ಮೈಸೂರು ವಿಶ್ವವಿದ್ಯಾಲಯಕ್ಕೆ ಈ ಕಾರ್ಯ ನಿರ್ವಹಿಸಲು ದಿನಾಂಕ 06.07.2015ರಂದು ವಿನಂತಿ ಪತ್ರವನ್ನು ನೀಡಲಾಗಿತ್ತು. ಮೈಸೂರು ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರುಗಳು, ಅಧಿಕಾರಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ರಾಜ್ಯದಾದ್ಯಂತ ಪ್ರವಾಸ ಮಾಡಿ, ಉತ್ತಮವಾಗಿ ಕಾರ್ಯನಿರ್ವಹಿಸುವ, ಕಾರ್ಯನಿರ್ವಹಿಸದಿರುವ, ಲಾಭದಲ್ಲಿರುವ ಹಾಗೂ ನಷ್ಟದಲ್ಲಿರುವ ಹಲವು ಸಹಕಾರಿಗಳನ್ನು ಆಯ್ಕೆ ಮಾಡಿ ಹಣಕಾಸಿನ ತಃಖ್ತೆಗಳನ್ನು ಹಾಗೂ ದೈನಂದಿನ ವ್ಯವಹಾರಗಳನ್ನು ಅವುಗಳ ಕಾರ್ಯನಿರ್ವಹಣೆಯಿಂದ ಸಮಾಜದ ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿದ್ದಾರೆ. ಸಹಕಾರಿಗಳ ಆಡಳಿತ ಮಂಡಲಿಯವರನ್ನು ಅಧಿಕಾರಿಗಳನ್ನು ಹಾಗೂ ಸದಸ್ಯರನ್ನು ಭೇಟಿ ಮಾಡಿ ಚರ್ಚೆ ಮಾಡಿದ್ದಾರೆ.

ಈ ಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸಿದ ಮೈಸೂರು ವಿಶ್ವವಿದ್ಯಾಲಯಕ್ಕೆ, ಎಲ್ಲಾ ಪ್ರಾಧ್ಯಾಪಕರಿಗೆ, ಅಧಿಕಾರಿಗಳಿಗೆ ಮತ್ತು ಸಂಶೋಧನಾ ವಿಭಾಗದ ವಿದ್ಯಾರ್ಥಿಗಳಿಗೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಮತ್ತು ಈ ಮೌಲ್ಯಮಾಪನಕ್ಕೆ ಸಹಕರಿಸಿದ ರಾಜ್ಯದ ಎಲ್ಲಾ ಸಹಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಇದು ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಸಿಂಹಾವಲೋಕನ ಎಂದು ನಾನು ಪರಿಗಣಿಸಿದ್ದೇನೆ. ಸಿಂಹ ತಾನು ನಡೆಯುವ ದಾರಿಯಲ್ಲಿ ಸ್ವಲ್ಪ ದೂರ ನಡೆದ ಮೇಲೆ ನಿಂತುಕೊಂಡು ತಾನು ನಡೆದ ದಾರಿ, ತನ್ನ ಹಿಂದೆ ಇರುವ ಪರಿಸರ ಹಾಗೂ ಬರುವ ಸವಾಲುಗಳನ್ನು ಅವಲೋಕನೆ ಮಾಡುವಂತೆ ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸಬೇಕಿದೆ. ಅದಕ್ಕಾಗಿ ಈ ಮೌಲ್ಯಮಾಪನ.

ವರದಿಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕನುಗುಣವಾಗಿ, ನಿಯಮ ಹಾಗೂ ಉಪವಿಧಿಗಳನ್ನು ರಚಿಸಿಕೊಂಡು ಉತ್ತಮವಾಗಿ, ವೈವಿಧ್ಯಮಯವಾಗಿ, ವೃತ್ತಿಪರರಾಗಿ ಮತ್ತು

ಪಾರದರ್ಶಕವಾಗಿ ಆಧುನಿಕತೆಯನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿರುವುದು ಸಂಯುಕ್ತ ಸಹಕಾರಿಗೆ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಧೈರ್ಯ, ಉತ್ಸಾಹ ಹಾಗೂ ಅಧಿಕ ಶಕ್ತಿಯನ್ನು ತುಂಬಿದಂತಾಗಿದೆ. 1959ರ ಕಾಯ್ದೆಯಡಿಯಲ್ಲಿ ಹಲವು ದಶಕಗಳಿಂದ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳಿಗೆ ನವ ಚೈತನ್ಯ ತುಂಬುವಂತೆ ಕಾರ್ಯನಿರ್ವಹಿಸುತ್ತಿವೆ ಎಂದು ಉಲ್ಲೇಖಿಸಿರುವುದು ಸ್ವಾಗತಾರ್ಹ.

ಪ್ರಸಕ್ತ ರಾಜ್ಯದಲ್ಲಿ 3985 ಸೌಹಾರ್ದ ಸಹಕಾರಿ ಸಂಸ್ಥೆಗಳಿವೆ. ಸೌಹಾರ್ದ ಸಹಕಾರಿಗಳ ಮೂಲಕವೇ ನಡೆಸುತ್ತಿರುವ ಇ-ಸ್ಟ್ಯಾಂಪಿಂಗ್ ಕೇಂದ್ರಗಳು 1023. ರೂ.550 ಕೋಟಿಗಳ ಶೇರು ಬಂಡವಾಳವಿದೆ. ರೂ.11,500 ಕೋಟಿಗಳ ಠೇವಣಿಯಿದೆ. ರೂ.8,500 ಕೋಟಿಗಳನ್ನು ಸಾಲ ನೀಡಲಾಗಿದೆ. ರೂ.12,500 ಕೋಟಿಗಳಷ್ಟು ದುಡಿಯುವ ಬಂಡವಾಳವಿದೆ. 60,000ಕ್ಕೂ ಹೆಚ್ಚು ಜನರಿಗೆ ಉದ್ಯೋಗಕ್ಕೆ ಅವಕಾಶವಾಗಿದೆ. ಸೌಹಾರ್ದ ಸಹಕಾರಿಗಳು ಒಟ್ಟಾರೆ ರೂ.210 ಕೋಟಿಗಳಿಗೆ ಹೆಚ್ಚು ಲಾಭ ಗಳಿಸಿದ್ದಾರೆ. ಸಮಾಜಮುಖಿಯಾಗಿ, ಉತ್ತಮ ಆರ್ಥಿಕ ಸಂಘಟನೆಗಳಾಗಿ ವಿಭಿನ್ನ ಚಟುವಟಿಕೆಗಳನ್ನು ಹಮ್ಮಿಕೊಂಡು ಹಳೆಯ ಸಹಕಾರಿ ಕಾಯ್ದೆಯಲ್ಲಿನ ಸಹಕಾರ ಸಂಘಗಳಿಗೆ ಪ್ರೋತ್ಸಾಹ ನೀಡುವಂತೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಸೌಹಾರ್ದ ಸಹಕಾರಿ ಸಂಸ್ಥೆಗಳು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವ ಅಗತ್ಯತೆ ಇದೆ. ರಾಜ್ಯದಲ್ಲಿ ಹೊಸ ಸೌಹಾರ್ದ ಸಹಕಾರಿಗಳನ್ನು ಹುಟ್ಟುಹಾಕಲು ಮತ್ತು ಸೌಹಾರ್ದ ಸಹಕಾರಿಗಳು ಹೊಸ ಹೊಸ ಯೋಜನೆಗಳನ್ನು ಪ್ರಾರಂಭಿಸಲು ಧೈರ್ಯ ತುಂಬಿದೆ. ವರದಿಯ ಪ್ರಮುಖ ಅಂಶಗಳನ್ನು ತಾವುಗಳೆಲ್ಲ ಅಧ್ಯಯನ ಮಾಡಿ. ಈ ಕ್ಷೇತ್ರದ ಅಭಿವೃದ್ಧಿಗೆ ತಮ್ಮ ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡಿ. ಬನ್ನಿ, ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಭದ್ರವಾಗಿ ಬೆಳೆಸೋಣ. ಸೌಹಾರ್ದ ಸಹಕಾರಿ ರಥವನ್ನು ಭರದಿಂದ ಮುಂದೆ ಸಾಗಿಸಲು ಎಲ್ಲರೂ ಒಟ್ಟಾಗಿ ಪ್ರಯತ್ನಿಸೋಣ ಎಂದು ತಿಳಿಸಿದರು.

ಮೈಸೂರು ವಿಶ್ವವಿದ್ಯಾಲಯದ ಪ್ರೊ. ಯಶವಂತ ಡೋಂಗ್ರೆಯವರು ಮೌಲ್ಯಮಾಪನ ವರದಿಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ, ನಿರ್ದೇಶಕರುಗಳಾದ ಶ್ರೀ ಎಸ್.ಆರ್.ಸತೀಶ್‌ಚಂದ್ರ, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ನಿವೃತ್ತ ಅಪರ ನಿಬಂಧಕರು ಹಾಗೂ ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರಾದ ಶ್ರೀ ಸಿ.ಎನ್.ಪರಶಿವಮೂರ್ತಿ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಪ್ರೋ.ವಿಶ್ವನಾಥ ಹಾಗೂ ಆಂದೋಲನ ಪತ್ರಿಕೆಯ ಸಂಪಾದಕರಾದ ಶ್ರೀ ರಾಜಶೇಖರ ಕೋಟಿಯವರುಗಳ ಸಮ್ಮುಖದಲ್ಲಿ ಹಸ್ತಾಂತರಿಸಿದರು.



ಪ್ರೊ. ಯಶವಂತ ಡೋಂಗ್ರೆಯವರು ಮೌಲ್ಯಮಾಪನ ವರದಿಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್‌ರವರಿಗೆ ಸಲ್ಲಿಸುತ್ತಿರುವುದು.



ಮೌಲ್ಯಮಾಪನ ತಂಡದ ಮುಖ್ಯಸ್ಥರಾದ ಪ್ರೊ. ಯಶವಂತ ಡೋಂಗ್ರೆ ಹಾಗೂ ತಂಡದ ಎಲ್ಲಾ ಸದಸ್ಯರುಗಳಿಗೆ ಸಂಯುಕ್ತ ಸಹಕಾರಿ ವತಿಯಿಂದ ಅಭಿನಂದನೆಗಳು.

### ವರದಿಯ ಸಾರಾಂಶ :

## ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ಸಹಕಾರ ರಂಗದಲ್ಲಿ ಬದಲಾವಣೆಯ ಗಾಳಿ ಬೀಸಿದೆ. ರಾಜ್ಯದ ಸಹಕಾರ ಚಳುವಳಿಯ ಮೇಲೆ ಗುರುತರ ಪ್ರಭಾವ ಬೀರಿದೆ – ಪ್ರೊ. ಯಶವಂತ ಡೋಂಗ್ರೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕೋರಿಕೆಯ ಮೇರೆಗೆ, ಮೈಸೂರು ವಿಶ್ವವಿದ್ಯಾಲಯದ ತೃತೀಯ ಕ್ಷೇತ್ರ ಸಂಶೋಧನಾ ಕೇಂದ್ರದ ವತಿಯಿಂದ, ಅದರ ಸಂಯೋಜಕರಾದ ಪ್ರೊ. ಯಶವಂತ ಡೋಂಗ್ರೆಯವರ ಮಾರ್ಗದರ್ಶನದಲ್ಲಿ ಈ ಸ್ವತಂತ್ರ ಅಧ್ಯಯನವನ್ನು ನಡೆಸಲಾಗಿದೆ. ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಡಾ.ಎಂ. ಇಂದಿರ ಇವರು ಮುಖ್ಯ ಸಂಶೋಧಕರಾಗಿಯೂ ಮತ್ತು ಡಾ. ಉಮ, ಡಾ.ಮೀರ ಮತ್ತು ಡಾ. ನಿಂಗಮ್ಮ ಬೆಟ್ಸೂರ್ ಇವರುಗಳು ಸಹ ಸಂಶೋಧಕರಾಗಿಯೂ ನಿರ್ವಹಿಸಿದ ಈ ಅಧ್ಯಯನವನ್ನು 2014–15ನೇ ಅವಧಿಯವರೆಗಿನ ಕಾರ್ಯಚಟುವಟಿಕೆಗಳ ಆಧಾರದಲ್ಲಿ ನಡೆಸಲಾಗಿದ್ದು, ಕರ್ನಾಟಕದ ವಿವಿಧ ಪ್ರದೇಶಗಳಿಂದ ಸುಮಾರು 204 ಸೌಹಾರ್ದ ಸಹಕಾರಿಗಳನ್ನು ಸಂದರ್ಶಿಸಿ, ಅವುಗಳ ಕಾರ್ಯವಿಧಾನವನ್ನು ಅಧ್ಯಯನ ಮಾಡಿ, ಅದರ ಆಧಾರದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಮೌಲ್ಯಮಾಪನ ಮಾಡಲಾಗಿದೆ. ಜೊತೆಗೆ ರಾಜ್ಯದ ಸೌಹಾರ್ದ ಸಂಯುಕ್ತ ಸಹಕಾರಿಯ ಕಾರ್ಯವಿಧಾನ ಮತ್ತು ಸಾಧನೆಗಳನ್ನೂ ಅಧ್ಯಯನ ಮಾಡಿ, ವಿಶ್ಲೇಷಿಸಲಾಗಿದೆ ಎಂದು ತಿಳಿಸಿದ ಡೋಂಗ್ರೆಯವರು ವರದಿಯ ಪ್ರಮುಖ ಅಂಶಗಳನ್ನು ಸಭೆಗೆ ತಿಳಿಸಿದರು.

**ಸೌಹಾರ್ದ ಸಹಕಾರಿಗಳ ಅಧ್ಯಯನ ಮುಖ್ಯಾಂಶಗಳು :**

- ಒಟ್ಟಾರೆಯಾಗಿ ರಾಜ್ಯದ ಬಹುತೇಕ ಸೌಹಾರ್ದ ಸಹಕಾರಿಗಳು ಉತ್ತಮ ವ್ಯವಹಾರ ನೀತಿಯನ್ನು ಅಳವಡಿಸಿಕೊಂಡಿರುತ್ತವೆ.
- ಉತ್ತಮ ವೃತ್ತಿಪರತೆಯಿಂದ ಕಾರ್ಯನಿರ್ವಹಿಸುತ್ತಿವೆ.
- ಸದಸ್ಯರ ವೈವಿಧ್ಯಮಯ ಅಗತ್ಯಗಳಿಗಾಗಿ ಹೊಸ ಹೊಸ ಸೇವೆಗಳನ್ನು ಪ್ರಾರಂಭಿಸಿವೆ.
- ಆರ್ಥಿಕ ಸದೃಢತೆಯೆಡೆಗೆ ಸಾಗಿರುತ್ತವೆ.
- ನೌಕರರ ಶಿಕ್ಷಣ ಮಟ್ಟ ಉತ್ತಮವಾಗಿದೆ.
- ಉತ್ತಮ ಕೌಶಲ್ಯವನ್ನು ಅಳವಡಿಸಿಕೊಂಡಿದ್ದಾರೆ.
- ಎರಡನೇ ಹಂತದ ನಾಯಕತ್ವ ಬೆಳವಣಿಗೆಯ ಅವಶ್ಯಕತೆಯಿದೆ.
- ಬಹುತೇಕ ಸಹಕಾರಿಗಳು ಸ್ವಂತ ಕಟ್ಟಡ ಅಥವಾ ಸ್ಥಿರ ಆಸ್ತಿಯನ್ನು ಹೊಂದ ಬೇಕಿದೆ.

- ಬಹುತೇಕ ಸಹಕಾರಿಗಳಲ್ಲಿ ಕಡಿಮೆ ಸಂಖ್ಯೆಯ ಸದಸ್ಯರನ್ನು ಹೊಂದಿರುವುದು.
- ಬಹುತೇಕ ಸಹಕಾರಿಗಳಲ್ಲಿ ಮಹಿಳಾ ಸದಸ್ಯರ ಸಂಖ್ಯೆ ಹೆಚ್ಚಿಸಬೇಕಿದೆ.
- ಎಲ್ಲಾ ಸಹಕಾರಿಗಳಲ್ಲಿ ಒಂದೇ ರೀತಿಯ ತಂತ್ರಜ್ಞಾನದ ಬಳಕೆ ಇಲ್ಲದಿರುವುದು.
- ರಾಜ್ಯ ಮಟ್ಟದಲ್ಲಿ ಸಹಕಾರಿಗಳಿಗೆ ಹಣಕಾಸು ವ್ಯವಸ್ಥೆ ಒದಗಿಸಬಲ್ಲ ಕೇಂದ್ರ ಸಂಸ್ಥೆ ಇಲ್ಲದಿರುವುದು.

**ಸಂಯುಕ್ತ ಸಹಕಾರಿಯ ಕಾರ್ಯ ಚಟುವಟಿಕೆಗಳ ಅಧ್ಯಯನ :**

- ಕರ್ನಾಟಕದ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಸಂಯುಕ್ತ ಸಹಕಾರಿಯ ರಚನೆಗೆ ಅವಕಾಶ ಮಾಡಿರುವುದು ಇಡೀ ದೇಶಕ್ಕೆ ಮಾದರಿಯಾಗಿದೆ.
- ವೃತ್ತಿಪರತೆಯಿಂದ ಕಾರ್ಯನಿರ್ವಹಿಸಲಾಗುತ್ತಿದೆ.
- ತಳಮಟ್ಟದ ಸಹಕಾರಿಗಳಿಗೆ ತಲುಪುತ್ತಾ, ಪ್ರಾಥಮಿಕ ಹಂತದ ಸಹಕಾರಿಗಳು ಸಂಯುಕ್ತ ಸಹಕಾರಿಯ ಮೂಲಕ ದೊರೆಯುತ್ತಿರುವ ತರಬೇತಿ, ವ್ಯವಹಾರ ಸಲಹೆ, ಕಾನೂನು ಸಲಹೆ, ಇ-ಸ್ಟ್ಯಾಂಪಿಂಗ್ ವ್ಯವಹಾರ ಮತ್ತಿತರ ಸಹಕಾರಗಳ ಬಗ್ಗೆ ಉತ್ತಮ ಅಭಿಪ್ರಾಯ ಹೊಂದಿದ್ದು, ಶೇಕಡ 95ರಷ್ಟು ಸಹಕಾರಿಗಳು ಸಂಯುಕ್ತ ಸಹಕಾರಿಯ ಕಾರ್ಯವಿಧಾನವನ್ನು ಉತ್ತಮ ಅಥವಾ ಅತ್ಯುತ್ತಮ ಎಂದು ವರ್ಗೀಕರಿಸಿವೆ.
- ಸೌಹಾರ್ದ ಸಹಕಾರಿ ಆಂದೋಲನವು ಪ್ರಬಲವಾಗುತ್ತಿರುವುದು ಗೋಚರವಾಗುತ್ತಿದ್ದು, ಮುಂದಿನ ವರ್ಷಗಳಲ್ಲಿ ಸಾಂಪ್ರದಾಯಿಕ ಸಹಕಾರಿ ಸಂಸ್ಥೆಗಳಿಗಿಂತ, ಸೌಹಾರ್ದ ಸಹಕಾರಿಯ ಕಡೆಗೆ ಜನರ ಒಲವು ಹೆಚ್ಚಾಗುವ ಎಲ್ಲಾ ಲಕ್ಷಣಗಳಿವೆಯೆಂದೂ, ಕೇವಲ ಹದಿನೈದು ವರ್ಷದಲ್ಲಿ ಸೌಹಾರ್ದ ಸಹಕಾರಿಯು ರಾಜ್ಯದ ಸಹಕಾರ ಚಳುವಳಿಯ ಮೇಲೆ ಗುರುತರ ಪ್ರಭಾವ ಬೀರಿದೆ ಎಂದು ಅಧ್ಯಯನವು ತೋರಿಸಿದೆ.
- ಸೌಹಾರ್ದ ಮಾದರಿಯ ಸಹಕಾರಿಗಳು ಹಲವು ರಾಜ್ಯಗಳಲ್ಲಿ ಇದ್ದರೂ, ಸಂಯುಕ್ತ ಸಹಕಾರಿಯ ವಿಷಯದಲ್ಲಿ ಕರ್ನಾಟಕವು ವಿಶಿಷ್ಟ ಸ್ಥಾನ ಹೊಂದಿದೆ. ಸಹಕಾರಿ ಶಿಕ್ಷಣ ಮತ್ತು ತರಬೇತಿ, ಸಲಹೆ ಮತ್ತು ಹೊಸ ಸಹಕಾರಿಗಳ ಆರಂಭಕ್ಕೆ ಸಹಕಾರ ಮುಂತಾದ ಮಹಾಮಂಡಳಗಳು ಸಾಧಾರಣ ಕೆಲಸಗಳನ್ನು ಉತ್ತಮವಾಗಿ ಮಾಡುತ್ತಿರುವುದರ ಜೊತೆಗೆ ವ್ಯವಹಾರ ವೃದ್ಧಿಗೆ ಪೂರಕವಾದ ಕೆಲಸಗಳು ಹಾಗೂ ಕಾನೂನು ವ್ಯಾಜ್ಯಗಳ ಪರಿಹಾರಕ್ಕಾಗಿ ಸೌಹಾರ್ದ ಸಹಕಾರಿಗಳಿಗಾಗಿಯೇ ಪ್ರತ್ಯೇಕ ನ್ಯಾಯಾಂಗ ವ್ಯವಸ್ಥೆಯನ್ನು ಸಾಧ್ಯವಾಗಿಸಿರುವುದು ಮತ್ತು ರಾಜ್ಯ ಮಟ್ಟದಲ್ಲಿ ಹಣಕಾಸಿನ ಸಂಸ್ಥೆಯನ್ನು ಹುಟ್ಟು ಹಾಕಲು ಉಪಕ್ರಮಗಳನ್ನು ಆರಂಭಿಸಿರುವುದು ಸಂಯುಕ್ತ ಸಹಕಾರಿಯ ಹೆಗ್ಗಳಿಕೆಯಾಗಿದೆ ಎಂದು ತಿಳಿಸಿದರು.
- ಸೌಹಾರ್ದ ಸಹಕಾರಿಗಳು ಮತ್ತು ಸಂಯುಕ್ತ ಸಹಕಾರಿ ಈ ಎರಡರ ಹಂತದಲ್ಲೂ ಹೊಸ ನಾಯಕತ್ವದ ಬೆಳವಣಿಗೆ, ನಿರ್ಧಾರಗಳಲ್ಲಿ ಹೆಚ್ಚಿನ ಪ್ರಜಾಸತ್ತಾತ್ಮಕತೆ ಹಾಗೂ ವಿಕೇಂದ್ರೀಕರಣದ ಅಗತ್ಯವಿದೆಯೆಂದೂ, ಸೌಹಾರ್ದ ಸಹಕಾರಿಗಳಲ್ಲಿ ಲಾಭಾಂಶ ವಿತರಣೆಯ ಪದ್ಧತಿಯಲ್ಲಿ ಬದಲಾವಣೆ ಮತ್ತು ವಿಶೇಷವಾಗಿ ಪತ್ತಿನ ಸಹಕಾರಿಗಳಲ್ಲಿ ಹೆಚ್ಚಿನ ಪಾರದರ್ಶಕತೆಯ ಅಗತ್ಯವಿದೆಯೆಂದೂ ಅಧ್ಯಯನದಿಂದ ತಿಳಿಯುತ್ತದೆ.

## ಸಹಕಾರ ವ್ಯವಸ್ಥೆಯಿಂದ ಶೋಷಿತ ವರ್ಗದವರಿಗೆ ಆರ್ಥಿಕ ಸ್ಥಿತಿಗತಿಗಳ ಸುಧಾರಣೆ ಸಾಧ್ಯ - ಶ್ರೀ ರಾಜಶೇಖರ ಕೋಟಿ

ಸಹಕಾರ ವ್ಯವಸ್ಥೆಯಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸೇವೆ ಮಾಡಲು ಸಾಧ್ಯ. ಸಮಾಜದ ಹಿಂದುಳಿದ ವರ್ಗದ ವಿಶೇಷವಾಗಿ ಶೋಷಿತರಿಗೆ ಆರ್ಥಿಕವಾಗಿ ಮುಂದುವರೆಯಲು ಸಾಕಷ್ಟು ಅವಕಾಶಗಳಿವೆ. ಈ ಬಗ್ಗೆ ತಿಳುವಳಿಕೆ ಮೂಡಿಸುವುದು ಅಗತ್ಯ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸಿದ್ದೇನೆ.

ಮೈಸೂರು ವಿಶ್ವವಿದ್ಯಾಲಯದ ವರದಿಯಲ್ಲಿಯೂ ಸಹ ಅದನ್ನೇ ತಿಳಿಸಿದ್ದಾರೆ. ಈ ಕ್ಷೇತ್ರ ಇನ್ನೂ ಚೆನ್ನಾಗಿ ಕಾರ್ಯ ಮಾಡಲಿಕ್ಕೆ ಈ ವರದಿಯ ಅಂಶಗಳು ನೆರವಾಗುತ್ತವೆ ಎಂದು ತಿಳಿಸಿದರು.

## ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ ಸಾಮಾಜಿಕ ನ್ಯಾಯದ ಬಗ್ಗೆ ಅಧ್ಯಯನ ಹಾಗೂ ತರಬೇತಿ ಅಗತ್ಯ - ಶ್ರೀ ಸಿ.ಎನ್. ಪರಶಿವಮೂರ್ತಿ

ಸಮಾರಂಭದಲ್ಲಿ ಮಾತನಾಡಿದ ಸಂಯುಕ್ತ ಸಹಕಾರಿಯ ಶಿಕ್ಷಣ ಸಲಹಾ ಸಮಿತಿಯ ಸದಸ್ಯರು ಹಾಗೂ ನಿವೃತ್ತ ಅಪರ ನಿಬಂಧಕರಾದ ಶ್ರೀ ಸಿ.ಎನ್. ಪರಶಿವಮೂರ್ತಿಯವರು ಸಂಯುಕ್ತ ಸಹಕಾರಿಯಲ್ಲಿ ಚುನಾಯಿತ ಸದಸ್ಯರು ಶಾಸನಬದ್ಧ ಕಾರ್ಯನಿರ್ವಹಿಸಲು ಸಾಧ್ಯ ಎಂಬುದನ್ನು ಸರಕಾರಕ್ಕೆ ಮನದಟ್ಟು ಮಾಡುವುದು ಅಗತ್ಯ. ನಿರ್ದೇಶಕರು ವೃತ್ತಿಪರತೆಯನ್ನು ಹಾಗೂ ಪಾರದರ್ಶಕತೆಯನ್ನು ಅಳವಡಿಸಿಕೊಂಡಿರುವುದು ಅಗತ್ಯ. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ತೃಪ್ತಿಕರವಾಗಿವೆಯಾದರೂ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು ಅಗತ್ಯ ಎಂದು ತಿಳಿಸಿದರು.

## ಸವಾಲುಗಳನ್ನು ಸ್ವೀಕರಿಸಿದರೆ ಮಾತ್ರ ಅವಕಾಶಗಳು ಲಭ್ಯವಾಗುತ್ತವೆ - ಶ್ರೀ ಎಸ್.ಆರ್. ಸತೀಶ್‌ಚಂದ್ರ

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿದ ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಭಾರತದ ಸಹಕಾರ ಕ್ಷೇತ್ರಕ್ಕೆ 112 ವರ್ಷಗಳ ಇತಿಹಾಸವಿದೆ. ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಕೇವಲ 15 ವರ್ಷಗಳ ಇತಿಹಾಸವಿದೆ. 112 ವರ್ಷಗಳಲ್ಲಿ ಸಾಧಿಸಲು ಸಾಧ್ಯವಾಗದ್ದನ್ನು 15 ವರ್ಷಗಳಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಸಾಧಿಸಿದೆ. ಸರಕಾರದ, ಸಾರ್ವಜನಿಕರ, ಸದಸ್ಯರ ಹಾಗೂ ಸಹಕಾರಿಗಳ ಮೆಚ್ಚುಗೆಗೆ ಪಾತ್ರವಾಗಿದೆ. ಈ 15 ವರ್ಷಗಳ ಅವಧಿಯಲ್ಲಿ ಸಾಕಷ್ಟು ಸಮಸ್ಯೆಗಳನ್ನು ಈ ಕ್ಷೇತ್ರ ಎದುರಿಸಿದೆ. ಆದಾಗ್ಯೂ ಈ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸಿದೆ. ಸವಾಲುಗಳನ್ನು ಸ್ವೀಕರಿಸಿದೆ. ಅವಕಾಶಗಳನ್ನು ಹುಡುಕಿದೆ. ಸಾಂಪ್ರದಾಯಕತೆಯಿಂದ ವೃತ್ತಿಪರತೆಯ ಕಡೆಗೆ ಸಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾಲಯದ ಪ್ರೋ.ಇಂದಿರಾ, ಪ್ರೋ.ವಿಶ್ವನಾಥ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು. ಪ್ರಾರಂಭದಲ್ಲಿ ಜನಶ್ರೀ ಸೌಹಾರ್ದ ಸಹಕಾರಿ ಅಧ್ಯಕ್ಷರಾದ ಶ್ರೀಮತಿ ಸವಿತಾ ಜಯಂತರವರ ಪ್ರಾರ್ಥನೆಯಾದ ನಂತರ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಕೊನೆಯಲ್ಲಿ ಮೈಸೂರು ವಿಭಾಗೀಯ ಅಧಿಕಾರಿ ಶ್ರೀ ಶಿವಕುಮಾರ ಬಿರಾದಾರರವರು ವಂದನೆ ಸಲ್ಲಿಸಿದರು.

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ಸಮಾಚಾರ

**ದಾವಾ ದಾಖಲಾತಿ :** ಬೆಳಗಾವಿ ವಿಭಾಗದಿಂದ 1123 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 553 ಸೇರಿದಂತೆ ಒಟ್ಟು 1676 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 827 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 195 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 02 ಪ್ರಕರಣ ಇತ್ಯರ್ಥಗೊಂಡಿದೆ.

## ಸೌಹಾರ್ದ ಸಹಕಾರಿಗಳಲ್ಲಿ ಇ-ಸ್ಟ್ಯಾಂಪಿಂಗ್ ಕೇಂದ್ರಗಳನ್ನು ನಡೆಸುತ್ತಿರುವ ಎಸಿಸಿ ಕೇಂದ್ರಗಳ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮಗಳು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿಗಳಲ್ಲಿ ಇ-ಸ್ಟ್ಯಾಂಪಿಂಗ್ ಕೇಂದ್ರಗಳನ್ನು ನಡೆಸುತ್ತಿರುವ ಎಸಿಸಿ ಕೇಂದ್ರಗಳ ಶಾಖಾ ಮುಖ್ಯಸ್ಥರು ಮತ್ತು ಸೂಪರ್‌ವೈಸರ್/ಯೂಸರ್‌ಗಳಿಗಾಗಿ ಮಾರ್ಚ್ ಮಾಹೆಯಲ್ಲಿ ಆಯೋಜಿಸಲಾಗಿದ್ದ 14 ತರಬೇತಿಗಳಿಂದ ಭಾಗವಹಿಸಬೇಕಾದ 998 ಇ-ಸ್ಟ್ಯಾಂಪಿಂಗ್ ಕೇಂದ್ರಗಳ ಪೈಕಿ 642 ಇ-ಸ್ಟ್ಯಾಂಪಿಂಗ್ ಕೇಂದ್ರಗಳಿಂದ 942 ಪ್ರತಿನಿಧಿಗಳು ಭಾಗವಹಿಸಿ, ತರಬೇತಿ ಪಡೆದರು.



ದಿನಾಂಕ : 06-03-2017, ಭಾಗವಹಿಸಿದ ಜಿಲ್ಲೆಗಳು : ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಹಾಗೂ ಹಾಸನ, ಸ್ಥಳ : ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಭವನ, ಮೈಸೂರು, 32 ಇ-ಸ್ಟ್ಯಾಂಪಿಂಗ್ ಕೇಂದ್ರಗಳಿಂದ 40 ಪ್ರತಿನಿಧಿಗಳು ಭಾಗವಹಿಸಿದ್ದರು.



ದಿನಾಂಕ : 07.03.2017, ಭಾಗವಹಿಸಿದ ಜಿಲ್ಲೆಗಳು : ದಕ್ಷಿಣ ಕನ್ನಡ ಮತ್ತು ಉಡುಪಿ, ಸ್ಥಳ : ಕ್ಯಾಂಪ್ಕೋ ಲಿ., ಸಭಾಭವನ, ಮಂಗಳೂರು, 48 ಇ-ಸ್ಟ್ಯಾಂಪಿಂಗ್ ಕೇಂದ್ರಗಳಿಂದ 74 ಪ್ರತಿನಿಧಿಗಳ ಭಾಗವಹಿಸಿದ್ದರು.



ದಿನಾಂಕ : 08-03-2017, ಭಾಗವಹಿಸಿದ ಜಿಲ್ಲೆಗಳು : ಧಾರವಾಡ, ಗದಗ ಹಾಗೂ ಹಾವೇರಿ, ಸ್ಥಳ : ಹೋಟೆಲ್ ರೇವನಕರ ಕಂಫರ್ಟ್ಸ್, ಹುಬ್ಬಳ್ಳಿ, 60 ಇ-ಸ್ಟ್ಯಾಂಪಿಂಗ್ ಕೇಂದ್ರಗಳಿಂದ 84 ಪ್ರತಿನಿಧಿಗಳು ಭಾಗವಹಿಸಿದ್ದರು.



ದಿನಾಂಕ : 09-03-2017, ಭಾಗವಹಿಸಿದ ಜಿಲ್ಲೆಗಳು : ಉತ್ತರ ಕನ್ನಡ, ಸ್ಥಳ : ಟಿ.ಎಂ.ಎಸ್. ಸಭಾ ಭವನ, ಶಿರಸಿ, 31 ಇ-ಸ್ಟ್ಯಾಂಪಿಂಗ್ ಕೇಂದ್ರಗಳಿಂದ 50 ಪ್ರತಿನಿಧಿಗಳು ಭಾಗವಹಿಸಿದ್ದರು.



ದಿನಾಂಕ : 10-03-2017, ಭಾಗವಹಿಸಿದ ಜಿಲ್ಲೆಗಳು : ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ ಹಾಗೂ ಚಿಕ್ಕಮಗಳೂರು, ಸ್ಥಳ : ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನ, ಶಿವಮೊಗ್ಗ, 66 ಇ-ಸ್ಟ್ಯಾಂಪಿಂಗ್ ಕೇಂದ್ರಗಳಿಂದ 90 ಪ್ರತಿನಿಧಿಗಳು ಭಾಗವಹಿಸಿದ್ದರು.



ದಿನಾಂಕ : 14-03-2017, ಭಾಗವಹಿಸಿದ ಜಿಲ್ಲೆಗಳು : ಬೆಳಗಾವಿ ಜಿಲ್ಲೆ (ಬೆಳಗಾವಿ, ಬೈಲಹೊಂಗಲ, ಖಾನಾಪೂರ ತಾಲ್ಲೂಕುಗಳು), ಸ್ಥಳ : ಕನ್ನಡಸಾಹಿತ್ಯ ಭವನ, ಬೆಳಗಾವಿ, 29 ಇ-ಸ್ಟ್ಯಾಂಪಿಂಗ್ ಕೇಂದ್ರಗಳಿಂದ 43 ಪ್ರತಿನಿಧಿಗಳು ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿಗಳು ಗಮನಿಸಬೇಕಾದ ಶಾಸನಬದ್ಧ ಕಾರ್ಯಗಳು

- **ವಾರ್ಷಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ :** ಆರ್ಥಿಕ ವರ್ಷ 2016–17 ಮುಕ್ತಾಯವಾಗಿದ್ದು, ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಲೆಕ್ಕಪತ್ರಗಳು ಅಂತಿಮಗೊಳಿಸಿ, ಲೆಕ್ಕಪರಿಶೋಧನೆಗಾಗಿ ಸಿದ್ಧತೆಯನ್ನು ಮಾಡಿಕೊಳ್ಳಬೇಕಿದೆ. ಅಂತಿಮಗೊಂಡ ವಾರ್ಷಿಕ ಲೆಕ್ಕಪತ್ರಗಳನ್ನು ಆಡಳಿತ ಮಂಡಲಿಗೆ ಮಂಡಿಸಿ, ಅನುಮೋದನೆ ಪಡೆದು ಏಪ್ರಿಲ್ 30ರೊಳಗಾಗಿ ಸಲ್ಲಿಸಲು ಸಹಕಾರಿಯ ಸಾಮಾನ್ಯ ಸಭೆಯಲ್ಲಿ ನೇಮಕವಾಗಿರುವ ಲೆಕ್ಕಪರಿಶೋಧಕರನ್ನು ಸಂಪರ್ಕಿಸಿ, ಲೆಕ್ಕಪರಿಶೋಧನೆಯ ಕಾರ್ಯ ಮಾಡಬೇಕಿದೆ.
- ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಇರುವ ಒಬ್ಬ ಲೆಕ್ಕಪರಿಶೋಧಕರನ್ನು ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಆಯ್ಕೆ ಮಾಡಿಕೊಂಡು, ಸದರಿಯವರಿಂದ ಲೆಕ್ಕಪರಿಶೋಧನೆ ಮಾಡಿಸುವ ಕ್ರಮ ಇಡುವುದು ಅಗತ್ಯ.
- **ವರ್ಷದ ಅರ್ಹ ಮತದಾರರ ಪಟ್ಟಿ ಪ್ರಕಟಣೆ :** ಅ) ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 32 (1) (ಡಿ) ಅಡಿ ಪ್ರಸಕ್ತ ವರ್ಷದ ಅರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸುವುದು ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿಯಾಗಿರುತ್ತದೆ. ಏಪ್ರಿಲ್ 30ರೊಳಗೆ ಅಂತಹ ಪಟ್ಟಿಯನ್ನು ಪ್ರಕಟಿಸಲು ಸೂಚಿಸಲಾಗಿದೆ. ಆ) ಹಿಂದಿನ ಮೂರು ಸಾಮಾನ್ಯ ಸಭೆಗಳಲ್ಲಿ ಕನಿಷ್ಠ ಒಂದು ಸಾಮಾನ್ಯ ಸಭೆಗೆ ಹಾಜರಾಗದ ಹಾಗೂ ಉಪವಿಧಿಗಳಲ್ಲಿ ನಿಗದಿಪಡಿಸಿದ ಕನಿಷ್ಠ ವ್ಯವಹಾರವನ್ನು ಮಾಡದ ಸದಸ್ಯರನ್ನು ಆಯಾ ವರ್ಷವೇ ತೆಗೆದು ಹಾಕುವ ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಲಾಗಿದೆ.
- **ವರ್ಷಾಂತ್ಯದ ಆರ್ಥಿಕ ಮಾಹಿತಿ ಸಲ್ಲಿಕೆ :** ಸಂಯುಕ್ತ ಸಹಕಾರಿಯು ಕಳುಹಿಸುವ ವರ್ಷಾಂತ್ಯದ ಆರ್ಥಿಕ ಮಾಹಿತಿ ನಮೂನೆಯು ತಲುಪಿದ ಕೂಡಲೇ ಭರ್ತಿ ಮಾಡಿ ಆದಷ್ಟು ಶೀಘ್ರವಾಗಿ ಕಳುಹಿಸಲು ಕ್ರಮವಿಡುವುದು. ಹಾಗೆಯೇ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಗಳನ್ನು ಪಾವತಿಸಲು ಸೂಕ್ತ ಗಮನ ನೀಡಲು ಕೋರಲಾಗಿದೆ. ನಿಗದಿತ ಸಮಯದಲ್ಲಿ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಗಳನ್ನು ಪಾವತಿಸಿ ಮುಂದಿನ ದಿನಗಳಲ್ಲಿ ತಮ್ಮ ಸಹಕಾರಿಯು ವಿವಿಧ ಅನರ್ಹತೆಗೊಳಗಾಗುವುದನ್ನು ತಪ್ಪಿಸಿ. ಈಗಾಗಲೇ ಹಿಂದಿನ ವರ್ಷಗಳಲ್ಲಿ ಪಾವತಿಸಿರದ ಸಹಕಾರಿಗಳು ಪಾವತಿಸಲು ಸೂಕ್ತ ಕ್ರಮವಿಡುವುದು.



ದಿನಾಂಕ : 15–03–2017, ಭಾಗವಹಿಸಿದ ಜಿಲ್ಲೆಗಳು : ಬೆಳಗಾವಿ ಜಿಲ್ಲೆ (ಗೋಕಾಕ, ಹುಕ್ಕೇರಿ, ಸವದತ್ತಿ, ರಾಮದುರ್ಗ ತಾಲ್ಲೂಕುಗಳು), ಸ್ಥಳ : ಹೋಟೆಲ್ ಅನಮೋಲ್ ಲಾಡ್ಜ್ & ರೆಸ್ಟೋರೆಂಟ್, ಗೋಕಾಕ, 45 ಇ–ಸ್ಟ್ಯಾಂಪಿಂಗ್ ಕೇಂದ್ರಗಳಿಂದ 65 ಪ್ರತಿನಿಧಿಗಳು ಭಾಗವಹಿಸಿದ್ದರು.



ದಿನಾಂಕ : 16–03–2017, ಭಾಗವಹಿಸಿದ ಜಿಲ್ಲೆಗಳು : ಬೆಳಗಾವಿ ಜಿಲ್ಲೆ (ಅಥಣಿ, ರಾಯಭಾಗ ಮತ್ತು ಚಿಕ್ಕೋಡಿ ತಾಲ್ಲೂಕುಗಳು), ಸ್ಥಳ : ಹೋಟೆಲ್ ಹುಲಿಗೆಮ್ಮ ರೆಸಿಡೆನ್ಸಿ, ಚಿಕ್ಕೋಡಿ, 40 ಇ–ಸ್ಟ್ಯಾಂಪಿಂಗ್ ಕೇಂದ್ರಗಳಿಂದ 63 ಪ್ರತಿನಿಧಿಗಳು ಭಾಗವಹಿಸಿದ್ದರು.



ದಿನಾಂಕ : 17–03–2017, ಭಾಗವಹಿಸಿದ ಜಿಲ್ಲೆಗಳು : ವಿಜಯಪುರ ಹಾಗೂ ಬಾಗಲಕೋಟೆ, ಸ್ಥಳ : ಹೋಟೇಲ್ ಶುಭಶ್ರೀ ಸಾಗರ, ವಿಜಯಪುರ, 66 ಇ–ಸ್ಟ್ಯಾಂಪಿಂಗ್ ಕೇಂದ್ರಗಳಿಂದ 99 ಪ್ರತಿನಿಧಿಗಳು ಭಾಗವಹಿಸಿದ್ದರು.



ದಿನಾಂಕ : 20–03–2017, ಭಾಗವಹಿಸಿದ ಜಿಲ್ಲೆಗಳು : ಕಲಬುರಗಿ, ಯಾದಗಿರಿ ಹಾಗೂ ಬೀದರ್, ಸ್ಥಳ : ಎಸ್.ಎಸ್.ಪಾಟೀಲ ಆಡಿಟೋರಿಮ್, ಛೇಂಬರ್ ಆಫ್ ಕಾಮರ್ಸ್, ಕಲಬುರಗಿ, 30 ಇ–ಸ್ಟ್ಯಾಂಪಿಂಗ್ ಕೇಂದ್ರಗಳಿಂದ 56 ಪ್ರತಿನಿಧಿಗಳು ಭಾಗವಹಿಸಿದ್ದರು.



ದಿನಾಂಕ : 21–03–2017, ಭಾಗವಹಿಸಿದ ಜಿಲ್ಲೆಗಳು : ರಾಯಚೂರು, ಸ್ಥಳ : ವಿನಯ ರೆಸಿಡೆನ್ಸಿ, ಸಿಂಧನೂರು, 34 ಇ–ಸ್ಟ್ಯಾಂಪಿಂಗ್ ಕೇಂದ್ರಗಳಿಂದ 46 ಪ್ರತಿನಿಧಿಗಳು ಭಾಗವಹಿಸಿದ್ದರು.



ದಿನಾಂಕ : 22–03–2017, ಭಾಗವಹಿಸಿದ ಜಿಲ್ಲೆಗಳು : ಕೊಪ್ಪಳ ಹಾಗೂ ಬಳ್ಳಾರಿ, ಸ್ಥಳ : ಹೋಟೆಲ್ ಸಿದ್ಧಾರ್ಥ ರೆಸಿಡೆನ್ಸಿ, ಹೊಸಪೇಟೆ, 54 ಇ–ಸ್ಟ್ಯಾಂಪಿಂಗ್ ಕೇಂದ್ರಗಳಿಂದ 83 ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು :

- ಏಪ್ರಿಲ್–ಮೇ ಮಾಹೆಯಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2 ದಿನಗಳ 2 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ಉದ್ದೇಶಿಸಲಾಗಿದೆ.
- ವಿಭಾಗವಾರು ಸೌಹಾರ್ದ ಸಹಕಾರಿಗಳ ಪ್ರವೇಶ ತರಬೇತಿಗಳನ್ನು ಆಯೋಜಿಸಲು ಉದ್ದೇಶಿಸಲಾಗಿದೆ.
- ಮೇ–ಜೂನ್ ಮಾಹೆಯಲ್ಲಿ ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರುಗಳಿಗಾಗಿ 2 ದಿನಗಳ ತರಬೇತಿಯನ್ನು ಆಯೋಜಿಸಲು ಉದ್ದೇಶಿಸಲಾಗಿದೆ.
- ಜೂನ್ ಮಾಹೆಯಲ್ಲಿ ದಿನಾಂಕ 19–06–2017 ರಿಂದ 28–06–2017ರವರೆಗೆ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 17ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯನ್ನು ಆಯೋಜಿಸಲು ಉದ್ದೇಶಿಸಲಾಗಿದೆ.

## ನೂತಕ ಆರ್ಥಿಕ ವರ್ಷದಲ್ಲಿನ ಬದಲಾವಣೆಗಳು

ದಿನಾಂಕ:01ಏಪ್ರಿಲ್ 2017ರಿಂದ ನೂತನ ಆರ್ಥಿಕ ವರ್ಷವು ಪ್ರಾರಂಭವಾಗಿದ್ದು, ದೇಶವ್ಯಾಪಿ ಅನೇಕ ವ್ಯವಸ್ಥೆಗಳು ಬದಲಾವಣೆಗೊಳಪಡುತ್ತಿವೆ.

- 2017–18ನೇ ಆರ್ಥಿಕ ವರ್ಷದಲ್ಲಿ ಶ್ರೀ ಅರುಣ್ ಜೇಟ್ಲಿಯವರು ಮಂಡಿಸಿದ ಬಜೆಟ್‌ನಲ್ಲಿ ನೇರ ಮತ್ತು ಪರೋಕ್ಷ ತೆರಿಗೆಗಳನ್ನು ಪರಿಷ್ಕರಿಸಲಾಗಿದ್ದು, ಅವುಗಳು ದಿನಾಂಕ 01 ಏಪ್ರಿಲ್ 2017 ರಿಂದ ಜಾರಿಯಾಗಲಿದೆ.
- ಹಳೆಯ ರೂ.500 ಹಾಗೂ ರೂ.1000 ನೋಟುಗಳ ವಿನಿಮಯಕ್ಕೆ ಅವಧಿ ಮುಕ್ತಾಯ. ಹಳೆಯ ನೋಟುಗಳನ್ನು ಜಮೆ ಮಾಡಲು ಎನ್‌ಆರ್‌ಐಗಳಿಗೆ ಜೂನ್ ತಿಂಗಳವರೆಗೆ ಅವಕಾಶ.
- ಐಟಿ ರಿಟರ್ನ್ಸ್‌ಗೆ ಹೊಸ ಅರ್ಜಿ. ತೆರಿಗೆ ಪಾವತಿಗೆ ಪ್ಯಾನ್ ಕಾರ್ಡ್ ಮತ್ತು ಆಧಾರ್ ಕಡ್ಡಾಯ.
- ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ (ಎಸ್‌ಬಿಐ) ಅದರ ಐದು ಸಹವರ್ತಿ ಬ್ಯಾಂಕುಗಳಾದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ತಿರುವಾಂಕೂರು, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಸ್ಟೇಟ್ ಬ್ಯಾಂಕ್ ಆಫ್ ಪಟಿಯಾಲಾ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಬಿಕಾನೇರ್ ಹಾಗೂ ಜೈಪುರಗಳು ವಿಲೀನವಾಗಿವೆ.
- ಎಸ್‌ಬಿಐನಲ್ಲಿ ಕನಿಷ್ಠ ಬ್ಯಾಲೆನ್ಸ್ ನಿಯಮಗಳನ್ನು ಬದಲಾಯಿಸಲಾಗಿದ್ದು, ಕನಿಷ್ಠ ಬ್ಯಾಲೆನ್ಸ್ ಇಲ್ಲದಿದ್ದರೆ ಶುಲ್ಕ ತೆರಬೇಕಾಗುತ್ತದೆ.
- ಪಿಪಿಎಫ್, ವಿಕಾಸ್ ಪತ್ರ ಮತ್ತು ಸುಕನ್ಯ ಸಮೃದ್ಧಿ ಯೋಜನೆ ಇತ್ಯಾದಿ ಸಣ್ಣ ಉಳಿತಾಯ ಯೋಜನೆಗಳ ಮೇಲೆ ಏಪ್ರಿಲ್–ಜೂನ್ ತ್ರೈಮಾಸಿಕ ಅವಧಿಗೆ ಅನುಗುಣವಾಗಿ ಶೇ.0.1ರಷ್ಟು ಬಡ್ಡಿದರ ಇಳಿಕೆ.
- ಕಾರು, ಮೋಟಾರ್ ಸೈಕಲ್ ಮತ್ತು ಆರೋಗ್ಯ ವಿಮೆ ದುಬಾರಿ.
- ಬಿಎಸ್ 3 ವಾಹನಗಳ ಮಾರಾಟ ನಿರ್ಬಂಧ.
- ಹೆದ್ದಾರಿಗಳಲ್ಲಿ ಮದ್ಯ ಮಾರಾಟಕ್ಕೆ ನಿರ್ಬಂಧ.

## ಇ–ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ

**ವಿಜಯಪುರ :** ಶ್ರೀ ಗುರುಮಾತೇಯರ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಯ ಇ–ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ವೈದ್ಯನಾಥ ಕರ್ಪೂರಮಠ, ನಿರ್ದೇಶಕರು, ಶ್ರೀ ಶಿದ್ಧೇಶ್ವರ ಸಹಕಾರಿ ಬ್ಯಾಂಕ್, ವಿಜಯಪುರ ಹಾಗೂ ಶ್ರೀ ಚಿದಾನಂದ ನಿಂಬಾಳಿಕರ, ಅಸಿಸ್ಟೆಂಟ್ ರಿಜಿಸ್ಟ್ರರ್ ಆಫೀಸರ್, ಇಂಡಿ ಹಾಗೂ ಶ್ರೀ ಚನ್ನಬಸಯ್ಯಾ ಹಿರೇಮಠ, ನಿರ್ದೇಶಕರು, ಬೀಳಗಿ, ಪಟ್ಟಣ ಸಹಕಾರಿ ಬ್ಯಾಂಕ್, ವಿಜಯಪುರ ಹಾಗೂ



ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಮಾಹಾದೇವಿ ಚ. ಹಿರೇಮಠ, ನಿರ್ದೇಶಕರು ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು.




## ಉಚಿತ ನೀರಿನ ಸೇವೆ

**ಶಿಗ್ಗಾಂವ :** ಸಂಪದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿಗ್ಗಾಂವ ಹಾಗೂ ಶ್ರೀ ಸತ್ಯಸಾಯಿ ಸೇವಾ ಸಂಸ್ಥೆ ಇವರ ಆಶ್ರಯದಲ್ಲಿ ದಿನಾಂಕ 06.03.2017ರಂದು ಒಂದು ತಿಂಗಳವರೆಗೆ ಶಿಗ್ಗಾಂವ ಪಟ್ಟಣದ ಹೊಸ ಬಸ್‌ನಿಲ್ದಾಣದಲ್ಲಿ ಉಚಿತ ನೀರಿನ ಸೇವೆಯನ್ನು ಹಮ್ಮಿಕೊಳ್ಳಲಾಯಿತು. ಸಂಪದ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ವಿಶ್ವನಾಥ ವಿರಕ್ತಮಠ, ಶ್ರೀ ಸತ್ಯಸಾಯಿ ಸೇವಾ ಸಂಚಾಲಕರಾದ ಶ್ರೀ ಉದಯ ಹೊಸಮನಿ ಹಾಗೂ ನ್ಯಾಯಾಧೀಶರಾದ ಶ್ರೀ ಕಮಲಾಕ್ಷ ಡಿ, ಡಾ॥ ಹನುಮಂತ.ಪಿ.ಹೆಚ್., ಪುರಸಭೆ ಅಧ್ಯಕ್ಷರಾದ ಶ್ರೀ ಶಿವಪ್ರಸಾದ ಸುರಗೀಮಠ ಉಪಸ್ಥಿತರಿದ್ದರು.

## ಸಹಕಾರಿಯ ಮಾಹಿತಿ ಪ್ರತಿ ಬಿಡುಗಡೆ

**ಹಗರಿಬೊಮ್ಮನಹಳ್ಳಿ :** ಶ್ರೀ ನಂದೀಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹಗರಿಬೊಮ್ಮನಹಳ್ಳಿ ಸಹಕಾರಿಯು ದಿನಾಂಕ 25.03.2017ರಂದು ಶ್ರೀ ಶ್ರೀ ಪರಮಪೂಜ್ಯ ಮಹೇಶ್ವರ ಸ್ವಾಮೀಜಿಯವರ ದಿವ್ಯಸಾನಿಧ್ಯದಲ್ಲಿ ಹೇವಿಳಂಬಿನಾಮ ಸಂವತ್ಸರದ ಯುಗಾದಿ ಹಬ್ಬದ ಶುಭಾಷಯಗಳ ಹಾಗೂ ಸಹಕಾರಿಯಲ್ಲಿ ದೊರೆಯುವ ಸೇವಾ ಸೌಲಭ್ಯಗಳು ಹಾಗೂ ಆಕರ್ಷಕ ಬಡಿದರಗಳ ಮಾಹಿತಿ ಪ್ರತಿಯನ್ನು ಬಿಡುಗಡೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಸಿ.ರುದ್ರಪ್ಪ, ಉಪಾಧ್ಯಕ್ಷರಾದ ಶ್ರೀ ಜಿ.ವೀರಣ್ಣ ಹಾಗೂ ನಿರ್ದೇಶಕರಾದ ಶ್ರೀ ಕೆ.ಬಸವರೆಡ್ಡಿ ಹಾಗೂ ಸಹಕಾರಿಯ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.



## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ನೂತನ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರ

**ಪುತ್ತೂರು** : ದಿನಾಂಕ 11-03-2017ರಂದು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ನೂತನ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರವು ಶ್ರೀ ವಿಶ್ವೇಶ್ವರ ಭಟ್ ಉಂಡೆಮನೆಯವರಿಂದ ಮಾತೃಛಾಯ ಸಭಾಭವನದಲ್ಲಿ ನಡೆಯಿತು.

ಕಾರ್ಯಾಗಾರವನ್ನು ಉದ್ಘಾಟಿಸಿ, ಮಾತನಾಡಿದ ಶ್ರೀ ಶೇಖರ್ ನಾರಾವಿ ಹಿರಿಯರ ಕನಸಿನ ಫಲರೂಪವಾಗಿ ರೂಪುಗೊಂಡ ಸಂಸ್ಥೆಯ ಬೆಳವಣಿಗೆಗೆ ಎಲ್ಲಾ ಸಿಬ್ಬಂದಿಗಳು ಪರಸ್ಪರ ಸ್ನೇಹ, ನಂಬಿಕೆ, ಉತ್ತಮ ಬಾಂಧವ್ಯದೊಂದಿಗೆ ಸಮಾನ ಮನಸ್ಸಿನಿಂದ ಕಾರ್ಯಪ್ರವೃತ್ತರಾಗಬೇಕು ಹಾಗೂ ಗ್ರಾಹಕರೊಂದಿಗೆ ನಗುಮುಖದ ಸೇವೆಯನ್ನು ನೀಡಬೇಕು ಎಂದು ಹೇಳುತ್ತಾ ಶುಭ ಹಾರೈಸಿದರು. ಕಾರ್ಯಾಗಾರದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಆರ್.ಸತೀಶ್ಚಂದ್ರರವರು ವಹಿಸಿದ್ದರು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅಥಿತಿಗಳಾಗಿ ಡಾ॥ ಸುಖೇಶ್ ಪಿ ಆಗಮಿಸಿದ್ದರು. ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ದ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ್.ಎ.ರವರು ಮಾತನಾಡಿದರು.

## ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ 4ನೇ ಉಚಿತ ಹೊಲಿಗೆ ತರಬೇತಿ ಶಿಬಿರ ಹಾಗೂ ಪೋಲೀಸ್ ಬೂತ್ ಕೊಡುಗೆ ಮತ್ತು ನಗದು ರಹಿತ ವ್ಯವಹಾರ ಮಾಹಿತಿ ತರಬೇತಿ ಕಾರ್ಯಾಗಾರ

**ಕಡಬ :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಇದರ ಸಹ ಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ಮಹಿಳಾ ಸಬಲೀಕರಣ ಮತ್ತು ಕೌಶಲ್ಯಾಭಿವೃದ್ಧಿ ಯೋಜನೆಯ ಅಂಗವಾಗಿ ದಿನಾಂಕ : 08.03.2017ರಂದು 4ನೇ ಉಚಿತ ಹೊಲಿಗೆ ತರಬೇತಿ ಶಿಬಿರದ ಉದ್ಘಾಟನಾ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

**ಪುತ್ತೂರು :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಇದರ ಸಹ ಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ಸಾಮಾಜಿಕ ಜಾಗೃತಿ ಯೋಜನೆಯ ಅಡಿಯಲ್ಲಿ ಪುತ್ತೂರು ನಗರದ ಹಳೆಯ ಪೋಸ್ಟ್ ಆಫೀಸ್‌ನ ಎದುರು ಪೋಲೀಸ್ ಚೌಕಿಯನ್ನು ಸಂಜೀವ ಶೆಟ್ಟಿ ಬಟ್ಟೆ ಅಂಗಡಿಯ ಮಾಲೀಕರಾದ ಶ್ರೀ ಗಿರಿಧರ್ ರಿಬ್ಬನ್ ಕತ್ತರಿಸುವುದರ ಮೂಲಕ ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಪುತ್ತೂರು ನಗರ ಸಂಚಾರಿ ಠಾಣೆಯ ಪಿ.ಎಸ್.ಐ. ಶ್ರೀ ವಿಠಲ ಶೆಟ್ಟಿಯವರು ರಸ್ತೆ ಸುರಕ್ಷತೆಯ ಕುರಿತು ಕರಪತ್ರವನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಇದರ ಅಧ್ಯಕ್ಷರಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿಯಾದ ಶ್ರೀ ಎಸ್.ಆರ್.ಸತೀಶ್ಚಂದ್ರ, ಉಪಾಧ್ಯಕ್ಷರಾದ ಶ್ರೀ



ವಿನಯ ಕುಮಾರ್ ಕಂದಡ್ಕ, ಸಂಸ್ಥೆಯ ನಿರ್ದೇಶಕರು, ಸಿಬ್ಬಂದಿ ವರ್ಗ ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

**ಕಾಯರ್ತೋಡಿ :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ದ ಸಹಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ) ಪುತ್ತೂರು ಮತ್ತು ಮಿತ್ರ ಬಳಗ (ರಿ.) ಕಾಯರ್ತೋಡಿ ಇವರ ಜಂಟಿ ಆಶ್ರಯದಲ್ಲಿ ದಿನಾಂಕ 19-03-2017ರಂದು ಕಾಯರ್ತೋಡಿ ಶ್ರೀ ಮಹಾವಿಷ್ಣು ದೇವಸ್ಥಾನದಲ್ಲಿ ನಗದು ರಹಿತ ವ್ಯವಹಾರ ಮಾಹಿತಿ ಕಾರ್ಯಾಗಾರವು ನಡೆಯಿತು.




## ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ತರಬೇತಿ ಕಾರ್ಯಾಗಾರ

**ಕಿನ್ನಿಮೂಲ್ಕಿ :** ಸುರಕ್ಷಾ ಸೌಹಾರ್ದ ಸಹಕಾರಿ ನಿಯಮಿತದ ಸಹಯೋಗದೊಂದಿಗೆ ದಿನಾಂಕ 04.03.2017ರಂದು ಶ್ರೀವೀರಭದ್ರ ಸಭಾಭವನ, ಕಿನ್ನಿಮೂಲ್ಕಿಯಲ್ಲಿ ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ವೃತ್ತಿಪರತೆ, ಶಾಖಾವಾರು ಲಾಭದಾಯಕವಾಗಿ ಕಾರ್ಯನಿರ್ವಹಣೆ ಮತ್ತು ನಗದುರಹಿತ ವ್ಯವಹಾರದ ಬಗ್ಗೆ ತರಬೇತಿ ಕಾರ್ಯಾಗಾರವನ್ನು ನಡೆಸಲಾಯಿತು. ಕಾರ್ಯಾಗಾರದ ಉದ್ಘಾಟನೆಯನ್ನು ಶ್ರೀ ಪ್ರವೀಣ ನಾಯಕ್, ಸಹಕಾರಿಗಳ ಉಪನಿಬಂಧಕರು, ಉಡುಪಿ ಜಿಲ್ಲೆ ಇವರು ನೆರವೇರಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಿ.ಎ.ಮಹದೇವಪ್ಪನವರು ಆಗಮಿಸಿದ್ದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ನಿರ್ದೇಶಕರಾದ ಶ್ರೀ ಭಾಸ್ಕರ್ ಕಾಮತ್‌ರವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಉಡುಪಿ ಜಿಲ್ಲೆಯ 53 ಸೌಹಾರ್ದ ಸಹಕಾರಿಗಳ ನಿರ್ದೇಶಕರು ಹಾಗೂ ಸಿಬ್ಬಂದಿಗಳು ತರಬೇತಿಯಲ್ಲಿ ಭಾಗವಹಿಸಿದ್ದರು.

## ಕುಡಿಯುವ ನೀರಿನ ಪೂರೈಕೆ



**ಜುಮನಾಳ** : ದಿ ಜುಮನಾಳ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಜುಮನಾಳ ಸಹಕಾರಿಯ ವತಿಯಿಂದ ಜುಮನಾಳ ಗ್ರಾಮದಲ್ಲಿ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಒದಗಿಸುವ ಯೋಜನೆಯನ್ನು ರೂಪಿಸಲಾಗಿದ್ದು, ಸದರಿ ಕಾರ್ಯಕ್ರಮದ ಉದ್ಘಾಟನೆ ಯನ್ನು ದಿನಾಂಕ 01 ಏಪ್ರಿಲ್ 2017ರಂದು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀಮತಿ ಸುಜಾತ, ಗ್ರಾಮ ಪಂಚಾಯತ್ ಅಧ್ಯಕ್ಷರು, ಸಹಕಾರಿಯ ಅಧ್ಯಕ್ಷರಾದ ಶ್ರೀ ಯಮನಪ್ಪ ಯ. ಸಾತಿಹಾಳ ಇವರುಗಳು ಉಪಸ್ಥಿತರಿದ್ದರು.

## ಗ್ಲೋಬಲ್ ಸೌಹಾರ್ದ ಸಹಕಾರಿಯ ಉದ್ಘಾಟನೆ



**ಬೆಂಗಳೂರು** : ಗ್ಲೋಬಲ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್ ರವರಿಂದ ಉದ್ಘಾಟನೆ.

## ನೂತನ ನಿರ್ದೇಶಕರುಗಳ ಆಯ್ಕೆ



ಶ್ರೀ ನಾಗಲಿಂಗೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೈಸೂರು ಸಹಕಾರಿಯ ಆಡಳಿತ ಮಂಡಳಿ ಚುನಾವಣೆಯಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಹಾಲಿನ ಪುಟ್ಟೇಗೌಡ ಸೇರಿದಂತೆ 12 ನಿರ್ದೇಶಕರು ಆಯ್ಕೆಯಾಗಿದ್ದಾರೆ.



ಶ್ರೀ ತ್ಯಾಗರಾಜನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ತ್ಯಾಗರಾಜನಗರ ಸಹಕಾರಿಗೆ 2016-17 ರಿಂದ 2021-22ನೇ ಸಾಲಿನವರೆಗೆ ಆಡಳಿತ ಮಂಡಲಿ ಸದಸ್ಯರ ಅವಿರೋಧ ಆಯ್ಕೆ.

## ಅಧ್ಯಕ್ಷರು - ಉಪಾಧ್ಯಕ್ಷರ ಆಯ್ಕೆ

### ಸಿರಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಶಿವಮೊಗ್ಗ



ಶ್ರೀ ನಾಗರಾಜ್ ಎಸ್.ಎಸ್.
ಅಧ್ಯಕ್ಷರು



ಶ್ರೀ ಸ್ವರೂಪ್ ಕೆ.ಎನ್.
ಉಪಾಧ್ಯಕ್ಷರು

### ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ



ಶ್ರೀ ಪಿ.ಎಸ್.ನಾಗರಾಜ ಶೆಟ್ಟಿ
ಅಧ್ಯಕ್ಷರು



ಶ್ರೀ ಎಂ.ಹೆಚ್.ಪ್ರಾಣೇಶ್
ಉಪಾಧ್ಯಕ್ಷರು

### ಶ್ರೀ ಚಿದಂಬರ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು



ಶ್ರೀ ಗೋವಿಂದ ಕೃ. ಕುಲಕರ್ಣಿ
ಅಧ್ಯಕ್ಷರು



ಶ್ರೀ ರಾಮಚಂದ್ರ ಜಿ. ಕುಲಕರ್ಣಿ
ಉಪಾಧ್ಯಕ್ಷರು

### ಜೀವನ ಸೌಹಾರ್ದ ವಿವಿಧೋದ್ದೇಶ ಸಹಕಾರಿ ನಿ., ಸಾಗರ



ಶ್ರೀ ಟಿ.ಜಿ.ಸದಾನಂದ
ಅಧ್ಯಕ್ಷರು



ಶ್ರೀ ಎಂ.ಆರ್.ಪಟೇಲ್
ಉಪಾಧ್ಯಕ್ಷರು

# ದಿನಾಂಕ 31.03.2017ಕ್ಕೆ ಅಂತ್ಯಗೊಂಡಿರುವ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ/ ಬ್ಯಾಂಕುಗಳ ಆರ್ಥಿಕ ಪ್ರಗತಿಯ ಅಂಕಿ ಅಂಶಗಳ ವಿವರಗಳು

## ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ

| | |
|---|---|
| ಶೇರು ಬಂಡವಾಳ | ರೂ.2 ಕೋಟಿ 31 ಲಕ್ಷ |
| ಠೇವಣಿಗಳು | ರೂ.122 ಕೋಟಿ 61 ಲಕ್ಷ |
| ಸಾಲ & ಮುಂಗಡಗಳು | ರೂ.88 ಕೋಟಿ 12 ಲಕ್ಷ |
| ಕಾಯ್ದಿಟ್ಟ ನಿಧಿಗಳು | ರೂ.13 ಕೋಟಿ 08 ಲಕ್ಷ |
| ದುಡಿಯುವ ಬಂಡವಾಳ | ರೂ.138 ಕೋಟಿ |
| ಒಟ್ಟು ವ್ಯವಹಾರ (DEPOSIT & LOANS) | ರೂ.210 ಕೋಟಿ |
| Gross NPA ಪ್ರಮಾಣ | ಶೇ.4.64 |
| CD RATIO | ಶೇ.72 |
| CAR | 11.50% |
| ನಿವ್ವಳ ಲಾಭ | ರೂ.2 ಕೋಟಿ 55 ಲಕ್ಷ |

## ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ

| | |
|---|---|
| ಶೇರು ಬಂಡವಾಳ | ರೂ.1.40 ಕೋಟಿಗಳು |
| ಠೇವಣಿಗಳು | ರೂ.76.70 ಕೋಟಿಗಳು |
| ಸಾಲ & ಮುಂಗಡಗಳು | ರೂ.50.24 ಕೋಟಿಗಳು |
| ದುಡಿಯುವ ಬಂಡವಾಳ | ರೂ.105.43 ಕೋಟಿಗಳು |
| ಒಟ್ಟು ವ್ಯವಹಾರ | ರೂ.126.94 ಕೋಟಿಗಳು |
| ನಿಧಿಗಳು | ರೂ.22.73 ಕೋಟಿಗಳು |
| ಲಾಭ | ರೂ.3.07 ಕೋಟಿಗಳು |
| Gross NPA | 1.8% |

## ಜನತಾ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು

| | |
|---|---|
| ಶೇರು ಬಂಡವಾಳ | ರೂ. 71,73,300 |
| ಠೇವಣಿಗಳು | ರೂ. 13,50,98,965.52 |
| ಸಾಲ & ಮುಂಗಡಗಳು | ರೂ. 14,01,26,554 |
| ನಿಧಿಗಳು | ರೂ. 1,97,07,717.35 |
| ಹೂಡಿಕೆಗಳು | ರೂ. 4,36,20,830 |
| ದುಡಿಯುವ ಬಂಡವಾಳ | ರೂ. 16,19,79,982.87 |
| ಒಟ್ಟು ವ್ಯವಹಾರ | ರೂ. 27,52,25,519.52 |
| ಒಟ್ಟು ಲಾಭ (Gross Profit) | ರೂ. 2,59,02,214 |
| ಲಾಭ | ರೂ. 78,06,967.23 |

## ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಹೊಸಪೇಟೆ

| | |
|---|---|
| ಶೇರು ಬಂಡವಾಳ | ರೂ. 5.35 ಕೋಟಿಗಳು |
| ಠೇವಣಿಗಳು | ರೂ. 265 ಕೋಟಿಗಳು |
| ಸಾಲ ಮತ್ತು ಮುಂಗಡಗಳು | ರೂ. 145 ಕೋಟಿಗಳು |
| ಒಟ್ಟು ವ್ಯವಹಾರ | ರೂ. 410 ಕೋಟಿಗಳು |
| ಒಟ್ಟು ಲಾಭ | ರೂ. 5.28 ಕೋಟಿಗಳು |
| ನಿವ್ವಳ ಲಾಭ | ರೂ. 3.15 ಕೋಟಿಗಳು |
| ಒಟ್ಟು ಸದಸ್ಯರು | 8000 |
| NPA | 0% |

## ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ

| | |
|---|---|
| ಶೇರು ಬಂಡವಾಳ | ರೂ. 25.46 ಕೋಟಿಗಳು |
| ಠೇವಣಿಗಳು | ರೂ. 201.44 ಕೋಟಿಗಳು |
| ಸಾಲ & ಮುಂಗಡಗಳು | ರೂ. 103.93 ಕೋಟಿಗಳು |
| ದುಡಿಯುವ ಬಂಡವಾಳ | ರೂ. 230.46 ಲಕ್ಷಗಳು |
| ಸದಸ್ಯರು | 12,561 |
| ಶಾಖೆಗಳು | 8+1 |
| ಲಾಭ | ರೂ. 1.25 ಕೋಟಿಗಳು |
| NPA | 0.03% |
| OD | 0.14% |

## ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

| | |
|---|---|
| ಠೇವಣಿಗಳು | ರೂ.392 ಕೋಟಿಗಳು |
| ಸಾಲ & ಮುಂಗಡಗಳು | ರೂ.257 ಕೋಟಿಗಳು |
| ಒಟ್ಟು ವ್ಯವಹಾರ | ರೂ.649 ಕೋಟಿಗಳು |
| ಲಾಭ | ರೂ.6.10 ಕೋಟಿಗಳು |
| NPA | 1.03% |

## ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಸಂಡೂರು

| | |
|---|---|
| ನಿವ್ವಳ ಲಾಭ | ರೂ.1.06 ಕೋಟಿಗಳು |
| NPA | 0% |
| ಒಟ್ಟು ವ್ಯವಹಾರ | ರೂ.66.90 ಕೋಟಿಗಳು |

## ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಮಾನ್ವಿ

| | |
|---|---|
| ಶೇರು ಬಂಡವಾಳ ಮತ್ತು ನಿಧಿಗಳು | ರೂ. 19 ಕೋಟಿಗಳು |
| ಠೇವಣಿಗಳು | ರೂ. 200.64 ಕೋಟಿಗಳು |
| ಸಾಲಗಳು | ರೂ. 135.48 ಕೋಟಿಗಳು |
| ದುಡಿಯುವ ಬಂಡವಾಳ | ರೂ. 226 ಕೋಟಿಗಳು |
| ಒಟ್ಟು ವ್ಯವಹಾರ | ರೂ. 336.12 ಕೋಟಿಗಳು |
| ನಿವ್ವಳ ಲಾಭ | ರೂ. 3.41 ಕೋಟಿಗಳು |
| NPA | 1.84% |
| ಒಟ್ಟು ಖಾತೆದಾರರು | 27991 |
| ಒಟ್ಟು ಸಾಲಗಾರರು | 11270 |
| ಸ್ವ-ಸಹಾಯ ಗುಂಪುಗಳು | 206 |
| ಮಹಿಳಾ ಖಾತೆದಾರರು | 11270 |

## ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ

| | |
|---|---|
| ಶೇರು ಬಂಡವಾಳ | ರೂ.87 ಲಕ್ಷಗಳು |
| ಶೇರುದಾರರ ಸಂಖ್ಯೆ | 5200 |
| ಠೇವಣಿಗಳು | ರೂ. 12 ಕೋಟಿಗಳು |
| ಮುಂಗಡಗಳು | ರೂ.9.6 ಕೋಟಿಗಳು |
| ನಿಧಿಗಳು | ರೂ.1.18 ಕೋಟಿಗಳು |
| ಹೂಡಿಕೆಗಳು | ರೂ.4.2 ಕೋಟಿಗಳು |
| ಲಾಭ | ರೂ.54.25 ಲಕ್ಷಗಳು |

## ಶಾಖೆಯ ಉದ್ಘಾಟನೆ

**ಅಥಣಿ :** ಸದಲಗಾ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಸದಲಗಾ ಬ್ಯಾಂಕಿನ 8ನೇ ಶಾಖೆಯನ್ನು ದಿನಾಂಕ 29.03.2017ರಂದು ಅಥಣಿ ಪಟ್ಟಣದಲ್ಲಿ ಪ.ಪೂ.ಸ್ವಸ್ತಿಶ್ರೀ ಜಿನಸೇನ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಗಳು, ಶ್ರೀಕ್ಷೇತ್ರ ನಾಂದಣಿ ಮಠ, ನಾಂದಣಿ ಇವರು ಉದ್ಘಾಟಿಸಿದರು. ಶ್ರೀ ಶಿವಬಸವ ಮಹಾಸ್ವಾಮಿಗಳು ಚರಮೂರ್ತಿಗಳು, ಸುಕ್ಷೇತ್ರ ಶ್ರೀ ಗಚ್ಚಿನಮಠ, ಅಥಣಿ ಇವರು ಬ್ಯಾಂಕಿನ ಭದ್ರತಾ ಕೊಠಡಿಯನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಬ್ಯಾಂಕಿನ ಎಲ್ಲಾ ನಿರ್ದೇಶಕರು ಹಾಗೂ ಅಥಣಿ ಶಾಖೆಯ ಸಲಹಾ ಸಮಿತಿ ಸದಸ್ಯರು ಉಪಸ್ಥಿತರಿದ್ದರು.



## ತಾಯಿಯಾದವಳು ತನ್ನ ಹೊಟ್ಟೆ ತುಂಬಿಸುವಿಕೆಗೆ ಕಾತರಿಸುವಳೇ?

ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.



ಭಗವಂತನಿಂದ ಜನಿತವಾದ ಪ್ರತಿ ಜೀವಿಯೂ ಸಕಾಲಿಕವಾದ ಆಹಾರ ಸೇವನೆಯಿಂದಲೇ ಸುಸ್ಥಿರ ದೇಹ ನಿರ್ವಹಣೆ ಸಾಧ್ಯವೆಂಬ ಅಂಶವು ಎಲ್ಲರೂ ಒಪ್ಪಿರುವ ವಿಚಾರ. ಆದರೆ, ಅಂತಹ ಸೇವನೆಯ ಪೂರ್ವ ತಾನು ಅನುಸರಿಸಬೇಕಾದ ವಿಧಿವಿಧಾನದ ಬಗ್ಗೆ ನಮ್ಮ ಪ್ರಾಥಮಿಕ ಶಾಲಾ ಶಿಕ್ಷಕರು ಹೇಳುತ್ತಿದ್ದ ಒಂದು ಚಿಕ್ಕ ಪ್ರಸಂಗ ನೆನಪಿಗೆ ಬರುತ್ತದೆ. ಅದೇನೆಂದರೆ, ಓರ್ವ ದಾನಿಯ ಮನೆಯಲ್ಲಿ ಹೇರಳವಾದ ಸಂಪತ್ತು, ಆಹಾರ ಧಾನ್ಯ, ಉತ್ತಮ ಹಾಗೂ ಉತ್ಕೃಷ್ಟ ಗುಣಮಟ್ಟದ ಊಟದ ಲಭ್ಯತೆ. ಪ್ರತಿದಿನ ಈರ್ವರು ಅತಿಥಿಗಳನ್ನು ಕರೆದು ಪ್ರತ್ಯೇಕ ಕೊಠಡಿಯಲ್ಲಿ ಊಟ ದಾನ ನೀಡುವ ವ್ಯವಸ್ಥೆ ಹಾಗೂ ಅಂದು ಕರೆದ ಈರ್ವರು ಅತಿಥಿಗಳಿಗೂ ಈ ದಾನಿಯ ಮನೆಯಲ್ಲಿನ ಹೇರಳವಾದ ಅಕ್ಷಯವಾದ ಲಭ್ಯತೆಯ ಮಾಹಿತಿಯಿತ್ತು. ಈ ಈರ್ವರು ಅತಿಥಿಗಳಲ್ಲಿ ಓರ್ವನಿಗೆ ಊಟ ಬಡಿಸಿದಾಗ "ತನಗೆ ಹೇಗೂ ಪುಷ್ಕಳವಾದ ಆಹಾರ ದೊರೆತಿದೆಯೆಂದು ತನಗೆ ಬೇಕಾದ್ದನ್ನೆಲ್ಲಾ ಸುರಿಸಿಕೊಂಡು ಹೊಟ್ಟೆ ತುಂಬಾ ಊಟ ಮಾಡುವ ಅಭ್ಯಾಸ". ಇನ್ನೊಬ್ಬನದು "ತಾನೊಬ್ಬನೇ ಊಟ ಮಾಡುವುದು ಬೇಡ, ಇನ್ನೋರ್ವ ಯಾರಾದರೂ ಬಾರದ ಹೊರತು ತಾನು ಊಟ ಮಾಡುವುದಿಲ್ಲವೆಂಬ ನಿರ್ಧಾರದ ಹೊರಹಾಕುವಿಕೆ". ಈ ಎರಡರಲ್ಲಿ ಉತ್ತಮನಾರೆಂದು ಜನವೇ ನಿರ್ಣಯಿಸಲೆಂದು ತೀರ್ಪನ್ನು ಕಾಯ್ದಿರಿಸಲು ತಿಳಿಸಿ, ವಿದ್ಯಾರ್ಥಿಗಳಿಗೆ ಈ ಅನುಭವವೇದ್ಯ ಕಥೆಯನ್ನು ಹೇಳಿ ಮುಂದಿನ ಭವಿಷ್ಯದ ದಿವಸಗಳಲ್ಲಿ ನಿಮ್ಮ ಜೀವನದಲ್ಲಿ ಯಾವ ತರಹದ ಅತಿಥಿ ನೀವಾಗಬೇಕೆಂಬುದನ್ನು ನಿರ್ಣಯಿಸಲು ನಮಗೇ ಬಿಡುತ್ತಿದ್ದರು. ಈ ಕಥೆಯು ನನಗೆ ದಾರ್ಶನಿಕ ಕವಿ ಡಿ.ವಿ.ಜಿ.ಯವರ ಅನುಭವವೇದ್ಯ ತ್ಯಾಗ ಪದ್ಯವೊಂದು ನೆನಪಾಗಿಸುತ್ತದೆ.

"ತ್ಯಜಿಸಿ ಭುಜಿಸಲ್ಕಲಿತವನೆ ಜಗಕೆ ಯಜಮಾನ
ನಿಜಕುಕ್ಷಿ ಚಿಂತೆಯೇಂ ಮೊದಲು ಮನೆತಾಯ್ಗೆ
ಭುಜಿಪ ಪತಿಸುತರೊಪ್ಪು ತುಪ್ಪವವಳೂಟಕ್ಕೆ
ಭಜಿಸು ನೀನಾ ವ್ರತವ ಮಂಕುತಿಮ್ಮ"

ಇಲ್ಲದವರಿಗೆ, ನಿರ್ಗತಿಕರಿಗೆ, ಅಸಹಾಯಕರಿಗೆ, ಅತಿಥಿಗಳಿಗೆ ಊಟ ಮಾಡುವ ಅವಕಾಶವನ್ನು ಮಾಡಿ, ತದನಂತರ ತಾನು ಊಟ ಮಾಡುವವನು ಜಗತ್ತಿಗೆ ಯಜಮಾನನಾಗಬಲ್ಲನೆಂಬುದು ಹಿರಿಯರ ವಾಣಿ. ಜೀವನಾನುಭವಿಗಳಾದ ಡಿ.ವಿ.ಜಿ.ಯವರು ನಮ್ಮೆಲ್ಲರಿಗೆ ಹತ್ತಿರವಾದ ಉದಾಹರಣೆಯನ್ನು ನೀಡುತ್ತಾ, ಸಂಸಾರದಲ್ಲಿನ ತಾಯಿಯಾದವಳು, ತನ್ನ ಹೊಟ್ಟೆಯ ತೃಪ್ತಿಗೆ ಕಾತರಿಸುತ್ತಾಳೆಯೇ ಎಂದು ಪ್ರಶ್ನಿಸುತ್ತಾ, ಮರುಕ್ಷಣಕ್ಕೆ ಅವರೇ ಉತ್ತರಿಸುತ್ತಾ, ತನ್ನ ಗಂಡ, ಮಕ್ಕಳು ಮತ್ತು ಸಂಸಾರದ ಸದಸ್ಯರು ತೃಪ್ತಿಯಿಂದ ಊಟ ಮಾಡಿದರೆ ಅವಳೇ ತುಪ್ಪದೂಟ ಮಾಡಿದಂತೆ ಸಂತೋಷಿಸುತ್ತಾಳೆಂದಿದ್ದಾರೆ.

ಇಲ್ಲಿ ಮಹತ್ವದ ಪದಗಳೆಂದರೆ "ಭಜಿಸು", "ನೀನು", "ಆ ವ್ರತವ" ಅಂದರೆ ನೀನು ಸಹ ಅಂತಹ ವ್ರತವನ್ನು ಅನುಸರಿಸು ಎನ್ನುವ ಡಿ.ವಿ.ಜಿ.ಯವರ "ದಾತನ ಸ್ಥಾನದಲ್ಲಿರುವ ಯಾರೇ ಆಗಲಿ ತಾನು ಸ್ವೀಕರಿಸುವ ಮೊದಲು ಇತರರಿಗೆ ನೀಡಿ ನಂತರ ತಾವು ಪಡೆಯಿರಿ" ಎಂಬ ಸಲಹೆಯು ಸಹಕಾರ ಕ್ಷೇತ್ರದ ಅಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿಯವರುಗಳಿಗೆ ಸಂಪೂರ್ಣವಾಗಿ ಅನ್ವಯವಾಗಲಿದೆ. ಇತರರ ಅಭ್ಯುದಯಕ್ಕೆ ಹಾಗೂ ಸೇವೆಗೆಂದೇ ಜನ್ಮತಾಳಿದ ಸಹಕಾರ ಸಂಸ್ಥೆಗಳಲ್ಲಿರುವವರು ಇತರರಿಗೆ ಸೇವೆ ನೀಡಿ ನಂತರ ತಾವು ಪಡೆಯಬೇಕೆಂಬುದು ಸೂಕ್ತ ಹಿತನುಡಿಯಾಗಿದೆಯೆನಿಸುತ್ತಿದೆ.

# ಸಹಕಾರಿಗಳಿಗೆ ಅನ್ವಯಿಸುವಂತೆ ದಿನಾಂಕ : 01-04-2017ರಿಂದ ಆಗಿರುವ ಬದಲಾವಣೆಗಳು

ಸಿಎ॥ ಬಿ.ವಿ.ರವೀಂದ್ರನಾಥ್, ಸಾಗರ.

**ಕೇಂದ್ರ ಸರ್ಕಾರವು ಇತ್ತೀಚೆಗೆ ಜಾರಿಗೊಳಿಸಿರುವ ಆದಾಯ ತೆರಿಗೆ ಕಾಯ್ದೆಯ ಪ್ರಕರಣ 269ಎಸ್.ಟಿ :**

**Section 269ST reads as under :**

No person shall receive an amount of two lakh rupees or more.

(a) in aggregate from a person in a day; or

(b) in respect of a single transaction; or

(c) in respect of transactions relating to one event or occasion from a person, otherwise than by an account payee cheque or an account payee bank draft or use of electronic clearing system through a bank account:

Provided that the provisions of this section shall not apply to -

(i) any receipt by

(a) Government;

(b) any banking company, post office savings bank or co-operative bank;

(ii) transactions of the nature referred to in section 269SS;

(iii) such other persons or class of persons or receipts, which the Central Government may, by notification in the Official Gazette, specify.

Non-compliance of this provision would attract equal penalty u/s 271DA

- ಯಾವುದೇ ವ್ಯಕ್ತಿಯು (ಸಹಕಾರಿಗಳೂ ವ್ಯಕ್ತಿಯ ವ್ಯಾಖ್ಯಾನದಲ್ಲಿ ಸೇರಿರುತ್ತಾರೆ) ಒಬ್ಬ ವ್ಯಕ್ತಿಯಿಂದ ಒಮ್ಮೆ ಅಥವಾ ಒಂದು ಘಟನೆಗೆ ಸಂಬಂಧಿಸಿದಂತೆ ಒಂದು ದಿನದಲ್ಲಿ ಎರಡು ಲಕ್ಷ ರೂ.ಗಳು ಅಥವಾ ಹೆಚ್ಚು ಮೊತ್ತವನ್ನು ಬ್ಯಾಂಕಿನ ಅಕೌಂಟ್ ಪೇಯೀ ಚೆಕ್ ಯಾ ಬ್ಯಾಂಕಿನ ಅಕೌಂಟ್ ಡ್ರಾಫ್ಟ್ ಯಾ ಬ್ಯಾಂಕ್ ಅಕೌಂಟಿನ ಮೂಲಕ ನಡೆಸುವ ಪಾವತಿ ತೀರುವಳಿ ವ್ಯವಸ್ಥೆಯ (Electronic Clearing System) ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ.
- ಈ ನಿಯಮ ಉಲ್ಲಂಘಿಸಿದಲ್ಲಿ ಸಮಾನ ಮೊತ್ತದ ದಂಡ ಪಾವತಿಸ ಬೇಕಾಗಿರುತ್ತದೆ. (271ಡಿಎ)
- ಈ ನಿಯಮ ಸರ್ಕಾರ, ಸಹಕಾರಿ ಬ್ಯಾಂಕುಗಳೂ ಸೇರಿದಂತೆ ಯಾವುದೇ ಬ್ಯಾಂಕು, ಅಂಚೆ ಕಛೇರಿಗಳು ಸ್ವೀಕರಿಸುವ ಮೊತ್ತಗಳಿಗೆ ಅನ್ವಯಿಸುವುದಿಲ್ಲ. ಆದರೆ, ಇವುಗಳಿಗೆ ಹೊರತಾದ ಯಾವುದೇ ವ್ಯಕ್ತಿಯೂ ಇವುಗಳಿಂದ ಕೂಡ ಯಾವುದೇ ಬಾಬ್ತು ಒಂದು ದಿನದಲ್ಲಿ ಎರಡು ಲಕ್ಷ ರೂ.ಗಳು ಅಥವಾ ಹೆಚ್ಚು ಮೊತ್ತವನ್ನು ಮೇಲೆ ತಿಳಿಸಿದ ರೀತಿಯ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ.
- ಈ ನಿಯಮದಿಂದಾಗಿ ಸಹಕಾರಿಗಳು ಉಳಿತಾಯ ಖಾತೆ, ಸಾಲ, ಠೇವಣಿ, ಬಂಡವಾಳ, ಆದಾಯವೂ ಸೇರಿದಂತೆ ಯಾವುದೇ ಬಾಬ್ತುಗಳಿಗೆ ಒಂದು ದಿನದಲ್ಲಿ ಒಬ್ಬ ವ್ಯಕ್ತಿಯಿಂದ ಎರಡು ಲಕ್ಷ ರೂ.ಗಳು ಅಥವಾ ಹೆಚ್ಚು ಮೊತ್ತವನ್ನು ಮೇಲೆ ತಿಳಿಸಿದ ರೀತಿಯ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ.
- ಇದರಿಂದಾಗಿ ಇನ್ನು ಮುಂದೆ ಯಾವುದೇ ವ್ಯಕ್ತಿಯು ಒಂದು ದಿನದಲ್ಲಿ ಚರಾಸ್ತಿ – ಸ್ಥಿರಾಸ್ತಿಗಳ ಖರೀದಿ – ವಿಲೇವಾರಿ, ಸಾಲ – ಠೇವಣಿಗಳ ವ್ಯವಹಾರಗಳೂ ಸೇರಿದಂತೆ ಯಾವುದೇ ವ್ಯವಹಾರಗಳನ್ನೂ ಎರಡು ಲಕ್ಷ ಮೀರಿ ಮೇಲೆ ತಿಳಿಸಿದ ರೀತಿಯ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಮಾಡುವಂತಿಲ್ಲ.
- ಈ ಮೇಲಿನ ನಿಯಮದ ಅಳವಡಿಕೆಯ ಕಾರಣದಿಂದ ಇದುವರೆಗೆ ಇದ್ದ ಎರಡು ಲಕ್ಷ ಮೀರಿದ ನಗದು ವ್ಯಾಪಾರ ವಹಿವಾಟಿನ (ಆಭರಣಗಳ ವಹಿವಾಟು 5 ಲಕ್ಷ) ಮೇಲೆ ಮೂಲದಲ್ಲಿ ತೆರಿಗೆ ಹಿಡಿತ (TCS) ಮಾಡಬೇಕಾದ ಪ್ರಾವಧಾನವನ್ನು ಹಿಂಪಡೆಯಲಾಗಿದೆ.
- ಈ ನಿಯಮ ಪಾನ್ ಹೊಂದಿರಲಿ ಇಲ್ಲದಿರಲಿ ಎಲ್ಲ ವ್ಯಕ್ತಿಗಳಿಗೂ ಅನ್ವಯಿಸುತ್ತದೆ.
- ಅಂತಹ ಸ್ವೀಕಾರವು ಆದಾಯ ತೆರಿಗೆ ವ್ಯಾಪ್ತಿಗೆ ಬರಲಿ, ಬಾರದಿರಲಿ ಎಲ್ಲ ವ್ಯವಹಾರಗಳಿಗೂ ಅನ್ವಯ.
- ಆದಾಯದ ಮೂಲ ಅಥವಾ ಆದಾಯದ ಸ್ವರೂಪ ಹೇಗೇ ಇರಲಿ ಈ ನಿಯಮ ಅನ್ವಯಿಸುತ್ತದೆ.
- ಅಪ್ಪ–ಮಗ, ಗಂಡ–ಹೆಂಡತಿ, ಮುಂತಾದ ಪರಸ್ಪರ ಸಂಬಂಧಿಕರ ಮಧ್ಯದ ವ್ಯವಹಾರವೂ ಇದರ ವ್ಯಾಪ್ತಿಯಲ್ಲಿ ಬರುತ್ತದೆ.
- ಯಾವುದೇ ತೆರಿಗೆ ಬಾಧ್ಯತೆ ಇರದ ಎರಡು ವ್ಯಕ್ತಿಗಳ ಮಧ್ಯದ ಈ ರೀತಿಯ ವ್ಯವಹಾರಗಳಿಗೂ ಈ ನಿಯಮ ಅನ್ವಯಿಸುತ್ತದೆ.
- ಈ ನಿಯಮದಿಂದಾಗಿ ನಿಗದಿತ ಮೊತ್ತಕ್ಕಿಂತ ಹೆಚ್ಚಿನ ವಹಿವಾಟನ್ನು ನಗದು, ಬೇರರ್ ಚೆಕ್, ಕ್ರಾಸ್ ಮಾಡದ ಚೆಕ್, ಸೆಲ್ಫ್ ಚೆಕ್, ವ್ಯವಹಾರದ ಲೆಕ್ಕಗಳಲ್ಲಿ ಎರಡು ವ್ಯಕ್ತಿಗಳ ಮಧ್ಯೆ ಹೊಂದಾಣಿಕೆ ಯಾ ವರ್ಗಾವಣೆ ನಮೂದುಗಳ (adjustment or transfer entry in the books of account) ಮೂಲಕವೂ ಮಾಡುವಂತಿಲ್ಲ!

ಮೇಲಿನ ನಿಯಮದನ್ವಯ ಬದಲಾದ ಸನ್ನಿವೇಶದಲ್ಲಿ ಕೆಳಕಾಣಿಸಿದ ವ್ಯವಹಾರಗಳ ಸ್ಥಿತಿ ಏನಾಗುತ್ತದೆ ಎಂದು ಚರ್ಚಿಸೋಣ :

**ಠೇವಣಿ ಸ್ವೀಕಾರ/ಮರುಪಾವತಿ :** ಆದಾಯ ತೆರಿಗೆ ಕಾಯ್ದೆಯ ಕಲಂ 269ಖಖರನ್ವಯ ಸಹಕಾರಿಯು ಯಾರಿಂದಲೂ (ಸದಸ್ಯರಿಂದಲೂ) 20,000 ರೂ.ಗಳಿಗೆ ಮೀರಿದ ಠೇವಣಿಯನ್ನು ನಗದು ರೂಪದಲ್ಲಿ ಸ್ವೀಕರಿಸುವಂತಿಲ್ಲ

ಮತ್ತು ಕಲಂ 269Tರನ್ವಯ 20,000 ರೂ.ಗಳಿಗೆ ಮೀರಿ ಠೇವಣಿ ಮರುಪಾವತಿಯನ್ನು ನಗದು ರೂಪದಲ್ಲಿ ಮಾಡುವಂತಿಲ್ಲ. ಈ ನಿಯಮದಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ.

**ಠೇವಣಿ ಇಡುವುದು/ಹಿಂಪಡೆತ :** ಮೇಲೆ ಕಾಣಿಸಿದ ಆದಾಯ ತೆರಿಗೆ ಕಾಯ್ದೆಯ ನಿಯಮ ಎಲ್ಲರಿಗೂ ಅನ್ವಯಿಸುವುದರಿಂದ ಸಹಕಾರಿ ಕೂಡ ಬೇರೆ ಸಂಸ್ಥೆಗಳಲ್ಲಿ 20,000 ರೂ.ಗಳಿಗೆ ಮೀರಿದ ಠೇವಣಿಯನ್ನು ನಗದು ರೂಪದಲ್ಲಿ ಇಡುವಂತಿಲ್ಲ ಮತ್ತು ಮರುಪಾವತಿ ಪಡೆಯುವಂತಿಲ್ಲ.

**ಸಾಲ ಸ್ವೀಕಾರ/ಮರುಪಾವತಿ :** ಮೇಲೆ ತಿಳಿಸಿದ ಆದಾಯ ತೆರಿಗೆ ಕಾಯ್ದೆಯ ಕಲಂ 269SSರನ್ವಯ ಸಹಕಾರಿಯು ಯಾರಿಂದಲೂ (ಸದಸ್ಯರಿಂದಲೂ) 20,000 ರೂ.ಗಳಿಗೆ ಮೀರಿದ ಸಾಲವನ್ನು ನಗದು ರೂಪದಲ್ಲಿ ಸ್ವೀಕರಿಸುವಂತಿಲ್ಲ ಮತ್ತು ಕಲಂ 269ಟಿರನ್ವಯ 20,000 ರೂ.ಗಳಿಗೆ ಮೀರಿ ಸಾಲ ಮರುಪಾವತಿಯನ್ನು ನಗದು ರೂಪದಲ್ಲಿ ಮಾಡುವಂತಿಲ್ಲ. ಈ ನಿಯಮದಲ್ಲೂ ಯಾವುದೇ ಬದಲಾವಣೆಯಾಗುವುದಿಲ್ಲ

**ಆದಾಯಗಳ ಸ್ವೀಕಾರ :** ಇದುವರೆಗೆ ಆದಾಯಗಳ ಸ್ವೀಕಾರಕ್ಕೆ ಯಾವುದೇ ನಗದು ಮಿತಿಯಿರಲಿಲ್ಲ. ಆದರೆ, ಆದಾಯ ತೆರಿಗೆ ಕಾಯ್ದೆಯ ಕಲಂ 269ಖಖಿ ಜಾರಿಯಾಗಿರುವುದರಿಂದ ಮುಂದೆ ಯಾವುದೇ ಆದಾಯದ ಬಾಬ್ತು ಒಂದು ದಿನದಲ್ಲಿ ಒಬ್ಬ ವ್ಯಕ್ತಿಯಿಂದ ಎರಡು ಲಕ್ಷ ರೂ.ಗಳು ಅಥವಾ ಹೆಚ್ಚು ಮೊತ್ತವನ್ನು ಕಾಯ್ದೆಯ ಕಲಂ 269ST ರಲ್ಲಿ ತಿಳಿಸಿದ ರೀತಿಯ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ

**ವೆಚ್ಚಗಳ ಪಾವತಿ :** ಆದಾಯ ತೆರಿಗೆ ಕಾಯ್ದೆಯ ಕಲಂ 40ಎ(3)ರನ್ವಯ ಯಾವುದೇ ಒಂದು ದಿನ ಒಬ್ಬ ವ್ಯಕ್ತಿಗೆ ರೂ.10,000ಗೆ ಮೀರಿ ಯಾವುದೇ ವೆಚ್ಚವನ್ನು ನಗದಾಗಿ ಪಾವತಿಸುವಂತಿಲ್ಲ. ಈ ನಿಯಮ ಇದುವರೆಗೆ 20,000 ರೂ.ಗಳಾಗಿತ್ತು. ದಿನಾಂಕ 01-04-2017ರಿಂದ ಈ ಮಿತಿಯನ್ನು 10,000 ರೂ. ಗಳಿಗೆ ಇಳಿಸಲಾಗಿವೆ.

**ಸಾಲ ವಿತರಣೆ/ಮರುಸ್ವೀಕಾರ :** ಸಹಕಾರಿಯ ಸಾಲ ವಿತರಣೆಗೆ ನಗದು ಮಿತಿ ಇಂತಿಷ್ಟೇ ಎಂಬುದು ಇದುವರೆಗೂ ಇರಲಿಲ್ಲ. ಆದರೆ, ಆದಾಯ ತೆರಿಗೆ ಕಾಯ್ದೆಯ ಕಲಂ 269ಖಖಿ ಜಾರಿಯಾಗಿರುವುದರಿಂದ ಮುಂದೆ ಯಾವುದೇ ಸಾಲದ ಬಾಬ್ತು ಒಂದು ದಿನದಲ್ಲಿ ಒಬ್ಬ ವ್ಯಕ್ತಿಯಿಂದ ಎರಡು ಲಕ್ಷ ರೂ.ಗಳು ಅಥವಾ ಹೆಚ್ಚು ಮೊತ್ತವನ್ನು ಕಾಯ್ದೆಯ ಕಲಂ 269ST ರಲ್ಲಿ ತಿಳಿಸಿದ ರೀತಿಯ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸಾಲಗಾರರೂ ಸ್ವೀಕರಿಸುವಂತಿಲ್ಲವಾದ್ದರಿಂದ ಅಂತಹ ಮಿತಿಗೆ ಮೀರಿ ಸಾಲ ವಿತರಣೆ ಕಾಯ್ದೆಯ ಕಲಂ 269ST ರಲ್ಲಿ ತಿಳಿಸಿದ ರೀತಿಯ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಮಾಡುವಂತಿಲ್ಲ.

ಸಹಕಾರಿಯ ಸಾಲ ವಸೂಲಾತಿಗೆ ನಗದು ಮಿತಿ ಇಂತಿಷ್ಟೇ ಎಂಬುದು ಇದುವರೆಗೂ ಇರಲಿಲ್ಲ. ಆದರೆ, ಆದಾಯ ತೆರಿಗೆ ಕಾಯ್ದೆಯ ಕಲಂ 269ST ಜಾರಿಯಾಗಿರುವುದರಿಂದ ಮುಂದೆ ಯಾವುದೇ ಸಾಲದ ಬಾಬ್ತು ಒಂದು ದಿನದಲ್ಲಿ ಒಬ್ಬ ವ್ಯಕ್ತಿಯಿಂದ ಎರಡು ಲಕ್ಷ ರೂ.ಗಳು ಅಥವಾ ಹೆಚ್ಚು ಮೊತ್ತವನ್ನು ಕಾಯ್ದೆಯ ಕಲಂ 269ST ರಲ್ಲಿ ತಿಳಿಸಿದ ರೀತಿಯ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ.

**ಬಂಡವಾಳ ಸ್ವೀಕಾರ/ಮರುಪಾವತಿ :** ಸದಸ್ಯರು ಸಹಕಾರಿಯ ಮಾಲೀಕರು ಆಗಿರುವುದರಿಂದ ಅವರಿಂದ ಪಾಲು ಬಂಡವಾಳದ ನಗದು ಸ್ವೀಕೃತಿಗೆ ಅಥವಾ ಮರುಪಾವತಿಗೆ ಇದುವರೆಗೆ ಯಾವುದೇ ಮಿತಿಯಿರಲಿಲ್ಲ. ಆದರೆ, ಆದಾಯ ತೆರಿಗೆ ಕಾಯ್ದೆಯ ಕಲಂ 269ST ಜಾರಿಯಾಗಿರುವುದರಿಂದ ಮುಂದೆ ಬಂಡವಾಳದ ಬಾಬ್ತು ಕೂಡ ಒಂದು ದಿನದಲ್ಲಿ ಒಬ್ಬ ವ್ಯಕ್ತಿಯಿಂದ ಎರಡು ಲಕ್ಷ ರೂ.ಗಳು ಅಥವಾ ಹೆಚ್ಚು ಮೊತ್ತವನ್ನು ಕಾಯ್ದೆಯ ಕಲಂ 269ST ರಲ್ಲಿ ತಿಳಿಸಿದ ರೀತಿಯ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ.

**ಉಳಿತಾಯ ಖಾತೆಯಲ್ಲಿ ವ್ಯವಹಾರ :** ಸಹಕಾರಿಯ ಸದಸ್ಯರ ಉಳಿತಾಯ ಖಾತೆಯಲ್ಲಿನ ವ್ಯವಹಾರಗಳಿಗೆ ನಗದು ಮಿತಿ ಇಂತಿಷ್ಟೇ ಎಂಬುದು ಇದುವರೆಗೆ ಇರಲಿಲ್ಲ. ಆದರೆ, ಆದಾಯ ತೆರಿಗೆ ಕಾಯ್ದೆಯ ಕಲಂ 269ST ಜಾರಿಯಾಗಿರುವುದರಿಂದ ಮುಂದೆ ಉಳಿತಾಯ ಖಾತೆಯ ಬಾಬ್ತು ಕೂಡ ಒಂದು ದಿನದಲ್ಲಿ ಒಬ್ಬ ವ್ಯಕ್ತಿಯಿಂದ ಎರಡು ಲಕ್ಷ ರೂ.ಗಳು ಅಥವಾ ಹೆಚ್ಚು ಮೊತ್ತವನ್ನು ಕಾಯ್ದೆಯ ಕಲಂ 269ಖಖಿ ರಲ್ಲಿ ತಿಳಿಸಿದ ರೀತಿಯ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ.

**ದಾನಗಳ ಪಾವತಿ :** ಆದಾಯ ತೆರಿಗೆ ಕಾಯ್ದೆಯ ಕಲಂ 80 ಜಿ ಅಡಿಯಲ್ಲಿ ಮಾನ್ಯವಾಗಲು ರೂ.2,000ಗೆ ಮೀರಿ ಯಾವುದೇ ದಾನಗಳನ್ನು ನಗದಾಗಿ ಪಾವತಿಸುವಂತಿಲ್ಲ. ಇದುವರೆಗೆ ನಗದು ರೂಪದಲ್ಲಿ ದಾನ ನೀಡಲು 20,000 ರೂ.ಗಳ ಮಿತಿಯಿತ್ತು.

ಇದಲ್ಲದೆ 2017ರ ವಿತ್ತೀಯ ಕಾಯ್ದೆಯಲ್ಲಿ ಸಹಕಾರಿಗಳ ವ್ಯವಹಾರಗಳಿಗೆ ಸಂಬಂಧಿಸಿದಂತೆ ಕೆಳಕಂಡ ಬದಲಾವಣೆಗಳನ್ನು ಗಮನಿಸುವುದೊಳಿತು.

**ತೆರಿಗೆ ವರದಿ ಸಲ್ಲಿಸುವಿಕೆಯಲ್ಲಿ ವಿಳಂಬ :** ಸಹಕಾರಿಗಳು ಪ್ರತಿವರ್ಷ ಸೆಪ್ಟೆಂಬರ್ 30ರೊಳಗಾಗಿ ತಮ್ಮ ಆದಾಯ ತೆರಿಗೆ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕಿರುತ್ತದೆ. ಇದುವರೆಗೆ ವಿಳಂಬವಾದಲ್ಲಿ ಯಾವುದೇ ದಂಡಗಳನ್ನು ವಿಧಿಸುತ್ತಿರಲಿಲ್ಲ. ಇನ್ನು ಮುಂದೆ ನಿಗದಿತ ದಿನಾಂಕದ ನಂತರ ಸಲ್ಲಿಸಿದಲ್ಲಿ ವಿಳಂಬಕ್ಕಾಗಿ ದಂಡ ತೆರಬೇಕಾಗುತ್ತದೆ. ನಿಗದಿತ ದಿನಾಂಕದ ನಂತರ ಡಿಸೆಂಬರ್ 31ರವರೆಗೆ 5,000 ರೂ.ಗಳ ದಂಡವನ್ನೂ, ತದನಂತರ 10,000 ರೂ.ಗಳ ದಂಡವನ್ನೂ ಪಾವತಿಸಬೇಕಾಗುತ್ತದೆ.

**ದಾಖಲಾತಿಗಳ ನಿರ್ವಹಣೆ :** ಸಹಕಾರಿಯ ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲ ಲೆಕ್ಕಪತ್ರಗಳು, ಲೆಕ್ಕಪುಸ್ತಕಗಳು, ಖರೀದಿ ಬಿಲ್ಲುಗಳು, ಮಾರಾಟದ ಬಿಲ್ಲುಗಳು, ವೆಚ್ಚ ಪಾವತಿಯ ವೋಚರ್‌ಗಳು, ಸ್ವೀಕೃತಿಯ ರಸೀದಿಗಳೂ ಸೇರಿದಂತೆ ಎಲ್ಲ ದಾಖಲಾತಿಗಳನ್ನೂ ಇನ್ನು ಮುಂದೆ ಹತ್ತು ವರ್ಷಗಳವರೆಗೆ ಕಾಪಾಡಬೇಕು. ಇದುವರೆಗೆ ಏಳು ವರ್ಷಗಳವರೆಗೆ ಕಾಪಾಡುವುದು ಅಗತ್ಯವಿತ್ತು.

ಸಹಕಾರಿಗಳ ಅವಗಾಹನೆಗಾಗಿ : ಈ ಕುರಿತು ಹೆಚ್ಚಿನ ಅಧ್ಯಯನದ ಅವಶ್ಯಕತೆ ಇದ್ದು, ಸಹಕಾರಿಗಳ ಜೊತೆ ಚಿಂತನ-ಮಂಥನ ಹಾಗೂ ಕಾರ್ಯಾಗಾರಗಳನ್ನು ಸಂಯುಕ್ತ ಸಹಕಾರಿಯ ವತಿಯಿಂದ ಆಯೋಜಿಸಲು ಕ್ರಮವಿಡಲಾಗುವುದು. ಅಲ್ಲದೇ, ಇದಕ್ಕೆ ಸಂಬಂಧಿಸಿದ ಇಲಾಖೆ ಹಾಗೂ ಕೇಂದ್ರ ಸರ್ಕಾರದೊಡನೆ ಪರಿಹಾರಕ್ಕಾಗಿ ಪ್ರಯತ್ನಿಸಲಾಗುವುದು.

**– ಸಂಪಾದಕರು**

## ನಿಮ್ಮ ಪ್ರಶ್ನೆ




## ನಮ್ಮ ಉತ್ತರ

**ಗುರುಪ್ರಸಾದ ಬಂಗೇರ,** ಅಧಿಕಾರಿ, ಕಾನೂನು ವಿಭಾಗ, ಕರಾಸೌಸಂಸನಿ

**ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ**

**– ಸಂಪಾದಕರು**

**ಯು.ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಉತ್ತರ ಕನ್ನಡ**

**ಪ್ರಶ್ನೆ 01 : ಸಹಕಾರಿಯು ವಿವಿಧ ರೀತಿಯ ನಿಧಿಗಳಾದ ಕಾಯ್ದಿಟ್ಟ ನಿಧಿ, ಕರಡು ಸಾಲದ ನಿಧಿ, ಸಾಮಾನ್ಯ ಕ್ಷೇಮ ನಿಧಿ, ನೌಕರರ ಕ್ಷೇಮ ನಿಧಿ, ಕಟ್ಟಡ ನಿಧಿ, ಅನಿರೀಕ್ಷಿತ ನಷ್ಟ ನಿಧಿ, ಧರ್ಮಾರ್ಥ ನಿಧಿ ಮತ್ತು ಪ್ರಚಾರ ನಿಧಿಗಳನ್ನು ಹೊಂದಿದ್ದು, ಸದರಿ ನಿಧಿಗಳ ವಿನಿಯೋಗದ ಕುರಿತಂತೆ ಹಾಗೂ ಇತರೆ ನಿಧಿಗಳನ್ನು ರಚಿಸಲು ಇರುವ ಅವಕಾಶ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಘಟನೋತ್ತರ ಸಾಮಾನ್ಯ ಸಭೆಯ ಮಂಜೂರಿಯ ವಿವೇಚನೆಗೊಳಪಟ್ಟು ಬೇರೆ ಉದ್ದೇಶಗಳಿಗೆ ನಿಧಿಗಳನ್ನು ಉಪಯೋಗಿಸಬಹುದೇ?**

**ಉತ್ತರ:** ಸಹಕಾರಿಯಲ್ಲಿರುವ ಮೀಸಲು ನಿಧಿ (ಕಾಯ್ದಿಟ್ಟ ನಿಧಿ) ಯನ್ನು ವಿನಿಯೋಗಿಸುವ ಕುರಿತಂತೆ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 7ರಲ್ಲಿ ತಿಳಿಸಲಾಗಿರುತ್ತದೆ. ಅದರಲ್ಲಿ ನಿಯಮ 7(1)(ಎ)ರಂತೆ 'ಮೀಸಲು ನಿಧಿಯನ್ನು ಸಹಕಾರಿಯು ಯಾವುದೇ ವ್ಯವಹಾರಕ್ಕೆ ಬಳಸತಕ್ಕದ್ದಲ್ಲ ಮತ್ತು ಇದರಲ್ಲಿ ಯಾವುದೇ ಪಾಲು ಸದಸ್ಯರಿಗೆ ಸಲ್ಲತಕ್ಕದ್ದಲ್ಲ' ಎಂದಿರುತ್ತದೆ ಮತ್ತು ನಿಯಮ 7(1)(ಬಿ)ರಂತೆ 'ಸಹಕಾರಿಯ ಉದ್ದೇಶ ಸಾಧನೆಗಳಿಗೆ ಅಗತ್ಯವಾದ ನಿವೇಶನ ಖರೀದಿ, ಕಟ್ಟಡ ನಿರ್ಮಾಣ ಅಥವಾ ನವೀಕರಣಕ್ಕೆ ಹಣದ ಅವಶ್ಯಕತೆ ಇದ್ದಲ್ಲಿ, ಸಾಮಾನ್ಯ ನಿಕಾಯವು ಅದರ ಸಾಮಾನ್ಯ ಸಭೆಯಲ್ಲಿ ಹಾಜರಿದ್ದು, ಮತ ನೀಡಿದ ಮತದಾನದ ಹಕ್ಕುಳ್ಳ ಸದಸ್ಯರ ಬಹುಮತದಿಂದ ಅಂಗೀಕರಿಸಲ್ಪಟ್ಟ ನಿರ್ಣಯದ ಮೂಲಕ ಸಾಮಾನ್ಯ ನಿಕಾಯದ ಅನುಮೋದನೆ ಪಡೆದು ನಿಧಿಯ ಶೇ.80ರವರೆಗಿನ ಮೊಬಲಗನ್ನು ಈ ಉದ್ದೇಶಕ್ಕಾಗಿ ಬಳಸಬಹುದು. ಆದಾಗ್ಯೂ, ಮುಂದಿನ ಹಣಕಾಸಿನ ವರ್ಷಗಳಲ್ಲಿ ದೊರೆತ ಲಾಭದಿಂದ ಈ ಮೊತ್ತವನ್ನು ಮೀಸಲು ನಿಧಿಗೆ ವರ್ಗಾಯಿಸತಕ್ಕದ್ದು' ಎಂದಿರುತ್ತದೆ.

ಉಳಿದಂತೆ ನಿಧಿಗಳನ್ನು ಸಹಕಾರಿಯ ಉಪವಿಧಿಯ ಪ್ರಾವಧಾನದಂತೆ ವಿನಿಯೋಗಿಸಬಹುದಾಗಿದೆ. ಒಂದು ವೇಳೆ ಸಹಕಾರಿಯ ಉಪವಿಧಿಯಲ್ಲಿ ಈ ಕುರಿತಾದ ಪ್ರಾವಧಾನವಿಲ್ಲದ ಪಕ್ಷದಲ್ಲಿ ಸಾಮಾನ್ಯ ಸಭೆಯ ಪೂರ್ವಾನುಮತಿ ಪಡೆದು ನಂತರದಲ್ಲಿ ವಿನಿಯೋಗಿಸಬೇಕಾಗಿರುತ್ತದೆ. ಕರಡು ಸಾಲದ ನಿಧಿಯನ್ನು ಸಾಮಾನ್ಯವಾಗಿ ವಸೂಲಾಗದೆಂದು ಪರಿಗಣಿತವಾದ ಸುಸ್ಥಿ ಸಾಲಗಳಿಗಾಗಿ ವಿನಿಯೋಗಿಸಬಹುದಾಗಿದೆ, ಸಾಮಾನ್ಯ ಕ್ಷೇಮ ನಿಧಿಯನ್ನು ಸದಸ್ಯರ ಕ್ಷೇಮಾಭಿವೃದ್ಧಿಗಾಗಿ ವಿನಿಯೋಗಿಸಬಹುದಾಗಿದೆ, ನೌಕರರ ಕ್ಷೇಮ ನಿಧಿಯನ್ನು ಸಹಕಾರಿಯ ನೌಕರರ ಕ್ಷೇಮಾಭಿವೃದ್ಧಿಗಾಗಿ ವಿನಿಯೋಗಿಸಬೇಕಾಗಿರುತ್ತದೆ, ಕಟ್ಟಡ ನಿಧಿಯನ್ನು ಸಹಕಾರಿಯ ಸ್ವಂತ ಉಪಯೋಗಕ್ಕಾಗಿ ನಿವೇಶನ/ ಕಟ್ಟಡ ಖರೀದಿ, ಕಟ್ಟಡ ನಿರ್ಮಾಣ ಅಥವಾ ನವೀಕರಣಕ್ಕಾಗಿ ವಿನಿಯೋಗಿಸಬಹುದಾಗಿದೆ, ಅನಿರೀಕ್ಷಿತ ನಷ್ಟ ನಿಧಿಯನ್ನು ಸಹಕಾರಿಗೆ ಅನಿರೀಕ್ಷಿತ ನಷ್ಟ ಉಂಟಾದಲ್ಲಿ ಅಂತಹ ನಷ್ಟವನ್ನು ಭರಿಸಲು ವಿನಿಯೋಗಿಸಬಹುದಾಗಿದೆ, ಧರ್ಮಾರ್ಥ ನಿಧಿ ಮತ್ತು ಪ್ರಚಾರ ನಿಧಿಯನ್ನು ಸೃಜಿಸಿರುವ ಉದ್ದೇಶಕ್ಕಾಗಿ (ಉಪವಿಧಿಯಲ್ಲಿರುವಂತೆ) ವಿನಿಯೋಗಿಸಬಹುದಾಗಿದೆ. ಸಹಕಾರಿಯು ಇತರ ನಿಧಿಗಳನ್ನು ರಚಿಸುವ ಕುರಿತಂತೆ ತನ್ನ ಉಪವಿಧಿಯಲ್ಲಿ ಪ್ರಾವಧಾನ ಕಲ್ಪಿಸಬೇಕಾಗಿರುತ್ತದೆ. ತಕ್ಷಣದ ಬಳಕೆಯ ನಿಧಿಗಳನ್ನು ಹೊರತುಪಡಿಸಿ ಇತರ ಎಲ್ಲಾ ನಿಧಿಗಳ ವಿನಿಯೋಗದ ಕುರಿತಂತೆ ಸಾಮಾನ್ಯ ಸಭೆಯ ಅನುಮೋದನೆ ಪಡೆದ ನಂತರದಲ್ಲಿ ಕ್ರಮವಿಡಬೇಕಾಗಿರುತ್ತದೆ. ತಕ್ಷಣದ ಬಳಕೆಯ ನಿಧಿಗಳಿಗೆ ಮಾತ್ರ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆ ಪಡೆಯಬಹುದಾಗಿದೆ.

ಆದರೆ, ಯಾವುದೇ ನಿಧಿಯನ್ನು ಸೃಜಿಸಿರುವ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಬೇಕು, ಸೃಜಿಸಿರುವ ಉದ್ದೇಶವನ್ನು ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ಉಪಯೋಗಿಸಲು ಅವಕಾಶವಿರುವುದಿಲ್ಲ.

**ಸ್ವಾಮಿ ವಿವೇಕಾನಂದ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹುಕ್ಕೇರಿ, ಬೆಳಗಾವಿ.**

**ಪ್ರಶ್ನೆ 02 : ಸಹಕಾರಿಯ ಚುನಾವಣೆಗೆ ಸಂಬಂಧಿಸಿದಂತೆ ಮಾಹಿತಿ ನೀಡಬೇಕಾದ ದಿನಾಂಕವನ್ನು ಚುನಾವಣೆ ನಡೆದ ದಿನಾಂಕವನ್ನು ಪರಿಗಣಿಸಬೇಕೇ ಅಥವಾ ಅಧಿಕಾರ ವಹಿಸಿಕೊಂಡ ದಿನಾಂಕವನ್ನು ಪರಿಗಣಿಸಬೇಕೇ?**

ಉತ್ತರ : ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಮಾಹಿತಿ ನೀಡಬೇಕಾದ ದಿನಾಂಕವನ್ನು ಚುನಾವಣೆ ನಡೆದ ದಿನಾಂಕದಿಂದ ಪರಿಗಣಿಸಬೇಕು. ಆಡಳಿತ ಮಂಡಲಿಯ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ ಸಂಖ್ಯೆ 5ಬಿ(3)ರಂತೆ ಚುನಾವಣಾಧಿಕಾರಿ ಆಡಳಿತ ಮಂಡಲಿಗಳಿಗೆ ಪದಾವಧಿ ಮುಕ್ತಾಯವಾಗುವ ದಿನಾಂಕದ ಕನಿಷ್ಟ 120 ದಿನಗಳ ಪೂರ್ವದಲ್ಲಿ ಸಹಕಾರಿ ಚುನಾವಣಾ ಪ್ರಾಧಿಕಾರಕ್ಕೆ ಅಗತ್ಯ ವಿವರಗಳನ್ನು ಸಲ್ಲಿಸಬೇಕಿರುವುದರಿಂದ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯ ಮುಕ್ತಾಯಕ್ಕಿಂತ ಕನಿಷ್ಟ 120 ದಿನಗಳಿಗೆ ಮುಂಚೆ ಚುನಾವಣಾಧಿಕಾರಿಗೆ ಲಿಖಿತವಾಗಿ ಕೋರಿಕೆ ಸಲ್ಲಿಸುವ ಮೂಲಕ ಸಹಕಾರಿಯ ಚುನಾವಣೆಗೆ ಕ್ರಮವಿಡಬೇಕು.

# ಗ್ರಾಹಕ ದೇವೋಭವ...! ಸಹಕಾರಿಗಳಲ್ಲಿ... ಗ್ರಾಹಕ ಸಂಬಂಧಗಳ ನಿರ್ವಹಣೆ




▸▸ ಬಿ.ಎ.ಮಹದೇವಪ್ಪ, ಸನ್ಮತಿ ಪ್ರತಿಷ್ಠಾನ, ಶಿವಮೊಗ್ಗ.

**'ಸಂತೃಪ್ತ ಗ್ರಾಹಕ' ಮತ್ತು 'ಸಂಸ್ಥೆಯ ಅಭಿವೃದ್ಧಿ'... ಎಲ್ಲ ವ್ಯಾವಹಾರಿಕ ಸಂಸ್ಥೆಗಳ ಗುರಿಯಾಗಿದೆ. ಗ್ರಾಹಕ ಸಂಬಂಧಗಳ ನಿರ್ವಹಣೆ ಇಂದಿನ ಅವಶ್ಯಕತೆಯಾಗಿದೆ. ಇದು ಸಹಕಾರಿಗಳಿಗೂ ಅನ್ವಯವಾಗುತ್ತದೆ. ಸಹಕಾರಿಗಳು... ಉತ್ತಮ ಸೇವೆ ನೀಡುವುದರ ಮೂಲಕ ಗ್ರಾಹಕರ ನಂಬಿಕೆ ಮತ್ತು ವಿಶ್ವಾಸವನ್ನು ಗಳಿಸಬೇಕು. ಉತ್ತಮ ಸೇವೆ ಎಂದರೆ... ಯಾವುದೇ ತಾರತಮ್ಯವಿಲ್ಲದೆ ಎಲ್ಲರೂ ಸಹಕಾರಿಗೆ ಬಂದು, ಅವರ ಕೆಲಸಗಳನ್ನು ಸಕಾಲದಲ್ಲಿ ಪೂರೈಸಿಕೊಂಡು ಹೋಗುವಂತಿರಬೇಕು. ಸಹಕಾರಿಗಳು ತಾಂತ್ರಿಕ ಸೌಲಭ್ಯಗಳ ಮೂಲಕ ಕಡಿಮೆ ಸಮಯದಲ್ಲಿ, ಕಡಿಮೆ ಖರ್ಚಿನಲ್ಲಿ... ಹೆಚ್ಚಿನ ಸೇವೆಯನ್ನು ನೀಡುವಂತಿರಬೇಕು. ಈ ಸೇವೆಗಳಲ್ಲಿ ಏನಾದರೂ ನ್ಯೂನತೆಗಳು ಕಂಡುಬಂದಲ್ಲಿ... ತಕ್ಷಣವೇ ಅವುಗಳನ್ನು ಗಮನಿಸಿ, ಪರಿಹಾರಾತ್ಮಕ ಕ್ರಮಗಳನ್ನು ಕೈಗೊಂಡಾಗ ಸಂಸ್ಥೆಯ ಮೇಲಿನ ವಿಶ್ವಾಸ ಹೆಚ್ಚುತ್ತದೆ. ಆಗ ಮಾತ್ರ ಸಂಸ್ಥೆಯೊಂದಿಗೆ ಗ್ರಾಹಕ ಸಂಬಂಧಗಳು ಉತ್ತಮಗೊಳ್ಳುತ್ತವೆ.**

ಸಹಕಾರಿ... ಸಮಾಜದ ಪ್ರತಿನಿಧಿ! ಸಾಮಾಜಿಕ ಬದ್ಧತೆಯನ್ನು ಹೊಂದಿರುವ ಒಂದು ವ್ಯಾವಹಾರಿಕ ಸಂಸ್ಥೆ. ವ್ಯವಹಾರ ಎಂದರೆ ಬ್ಯುಸಿನೆಸ್. Business means people. ಸಂಸ್ಥೆಯ ಸದಸ್ಯರು, ನಿರ್ದೇಶಕರು, ಪದಾಧಿಕಾರಿಗಳು, ಸಿಬ್ಬಂದಿಗಳು, ಠೇವಣಿದಾರರು... ಎಲ್ಲರೂ ಜನರೇ. ಈ ಜನರಿಗೆ ಬೇರೆ ಬೇರೆ ಧಾರ್ಮಿಕ, ಆರ್ಥಿಕ, ಸಾಮಾಜಿಕ ಹಿನ್ನೆಲೆ ಇರುವುದರಿಂದ... ಇವರುಗಳ ನಿರೀಕ್ಷೆಗಳೂ ಕೂಡ ವಿಭಿನ್ನವಾಗಿರುತ್ತವೆ. ಇವರ ವೈವಿಧ್ಯಮಯವಾದ ನಿರೀಕ್ಷೆಗಳನ್ನು ಅರ್ಥ ಮಾಡಿಕೊಂಡು, ಅದರಂತೆ ಸೇವೆ ನೀಡುವುದರ ಮೂಲಕ ಈ ಜನರ ಮನಸ್ಸು-ಮನಸ್ಸುಗಳ ಮಧ್ಯೆ ಉತ್ತಮ ಸಂಬಂಧವನ್ನು ಏರ್ಪಡಿಸುವುದೇ ನಿಜವಾದ ವ್ಯಾಪಾರ.

ಸಂಬಂಧಗಳು ಎಂದರೆ... ಕೂಡಿಸುವಿಕೆ, ಒಂದು ಮಾಡುವಿಕೆ ಎಂದರ್ಥ. ಗ್ರಾಹಕರೊಂದಿಗೆ ಉತ್ತಮ ಸಂಬಂಧ ಇದ್ದಲ್ಲಿ ಮಾತ್ರ... ಸಂಸ್ಥೆಯ ಅಭಿವೃದ್ಧಿ ಸಾಧ್ಯ. ಏಕೆಂದರೆ... ಇಲ್ಲಿ ಗ್ರಾಹಕನೇ ಮುಖ್ಯ ಬಿಂದು. ಒಮ್ಮೆ ಬಂದ ಗ್ರಾಹಕ ಕೊನೆಯವರೆಗೂ ನಮ್ಮಲ್ಲಿ ಉಳಿಯಬೇಕು. ಇದನ್ನೇ Retain the Customer ಎಂದು ಹೇಳಲಾಗುತ್ತದೆ. ಇದು ಅನಿವಾರ್ಯವೂ ಆಗಿದೆ. ಸಹಕಾರಿಯಲ್ಲಿ ಗ್ರಾಹಕ ಸಂಬಂಧಗಳು ಉತ್ತಮವಾಗಿರಬೇಕಾದರೆ ಮೊದಲು ಗ್ರಾಹಕರನ್ನು, ಅವರ ಸ್ಥಾನದಲ್ಲಿಯೇ ನಿಂತು ಅರ್ಥ ಮಾಡಿಕೊಳ್ಳಬೇಕು. ಗ್ರಾಹಕರ ನಿರೀಕ್ಷೆಗಳನ್ನು ತಿಳಿದುಕೊಳ್ಳಬೇಕು. ಈ ಬಗ್ಗೆ ಬ್ಯಾಂಕ್ ತಜ್ಞರೊಬ್ಬರು ಗ್ರಾಹಕರ ನಿರೀಕ್ಷೆ ಕುರಿತು ಈ ರೀತಿ ಹೇಳಿದ್ದಾರೆ... "ಸಂಸ್ಥೆಯು ನನ್ನನ್ನು ಗುರುತಿಸಿದೆ. ಸಂಸ್ಥೆಯ ವ್ಯವಹಾರವನ್ನು ಅರ್ಥ ಮಾಡಿಕೊಂಡಿದ್ದೇನೆ. ನನ್ನ ಅವಶ್ಯಕತೆಗಳೇನು ಎಂಬುದು ಸಂಸ್ಥೆಯು ಚೆನ್ನಾಗಿ ತಿಳಿದಿದೆ. ನನಗೆ ಸಕಾಲದಲ್ಲಿ, ಕಡಿಮೆ ಖರ್ಚಿನಲ್ಲಿ ಸೇವಾ-ಸೌಲಭ್ಯಗಳು ದೊರೆಯುತ್ತಿವೆ, ನನಗೆ ತೃಪ್ತಿಯಿದೆ" ಎಂದು ಗ್ರಾಹಕನು ಭಾವಿಸಿದಾಗ... ಅದು ಉತ್ತಮ ಗ್ರಾಹಕ ಸಂಬಂಧ ಎನಿಸುತ್ತದೆ.

ದೇಶದ ಸಹಕಾರ ಕ್ಷೇತ್ರದಲ್ಲಿ ಹೊಸ ಅಲೆ ಪ್ರಾರಂಭವಾಗಿ ಎರಡು ದಶಕಗಳೇ ಆಗಿವೆ. ಸಹಕಾರ ಸಂಸ್ಥೆ ಸಾಮಾಜಿಕ ಬದ್ಧತೆಯನ್ನು ಹೊಂದಿರುವ ಒಂದು ವ್ಯಾಪಾರಿ ಸಂಸ್ಥೆ... ಎಂಬುದನ್ನು ಈ ಕ್ಷೇತ್ರದ ಎಲ್ಲರೂ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಉತ್ತಮ ಆಡಳಿತ, ಪರಸ್ಪರ ವಿಶ್ವಾಸ, ನಂಬಿಕೆ, ಗುಣಮಟ್ಟದ ಸೇವೆ... ಈ ದಿನದ ಅವಶ್ಯಕತೆಗಳೆಂದು ಗೊತ್ತಾಗುತ್ತಿವೆ. ಗ್ರಾಹಕ ಸಂಬಂಧಗಳ



ವಿಷಯ ಬಂದಾಗ ಸದಸ್ಯ ಸೇವೆ ಮೊದಲ ಆದ್ಯತೆಯನ್ನು ಪಡೆದುಕೊಳ್ಳುತ್ತಿದೆ. ಸದಸ್ಯರು ಸಹಕಾರ ಸಂಸ್ಥೆಯ ಮಾಲೀಕರು. ಅವರೇ... ನಿಜವಾದ ಗ್ರಾಹಕರು. ಮಾಲೀಕರಾಗಿ, ಗ್ರಾಹಕರಾಗಿ ಸಂಸ್ಥೆಯ ಅಭಿವೃದ್ಧಿಯಲ್ಲಿ ಅವರ ಪಾತ್ರ ಬಹಳ ಮುಖ್ಯವಾಗಿದೆ.

ಅದೇ ರೀತಿ ಸಿಬ್ಬಂದಿ ವರ್ಗದವರನ್ನು ಸಂಸ್ಥೆಯ ಆಂತರಿಕ ಗ್ರಾಹಕರೆಂದು ಗುರುತಿಸಲಾಗುತ್ತಿದೆ. ವಿನೀತ್ ನಾಯರ್‌ರವರು ಬರೆದಿರುವ "Employees first... Customers second" ಎಂಬ ಪುಸ್ತಕದಲ್ಲಿ... ಒಂದು ವ್ಯಾವಹಾರಿಕ ಸಂಸ್ಥೆಯ ಯಶಸ್ಸು ಮುಖ್ಯವಾಗಿ ಆ ಸಂಸ್ಥೆಯ ಸಿಬ್ಬಂದಿಗಳು, ತಮ್ಮ ಗ್ರಾಹಕರೊಂದಿಗೆ ಹೇಗೆ ವರ್ತಿಸುತ್ತಾರೆ? ಅವರ ಸಂವಹನ ಕಲೆ ಹೇಗಿದೆ? ನಗು ಮುಖದ ಸೇವೆ ಇದೆಯೆ? ಎಂಬ ಸಾಫ್ಟ್‌ಸ್ಕಿಲ್‌ಗಳನ್ನು ಆಧರಿಸಿದೆ ಎಂಬುದನ್ನು ವಿವರವಾಗಿ ತಿಳಿಸಲಾಗಿದೆ. ಈ ಹಿನ್ನೆಲೆಯಲ್ಲಿ... Increasing both quality and quantity remaining the agenda for Cooperation ಎಂಬ ಮಾತುಗಳು ಸತ್ಯವಾಗಿವೆ.

ಮಾತೃ ದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವ, ಅತಿಥಿ ದೇವೋಭವ... ಇವುಗಳನ್ನು ನಾವೆಲ್ಲರೂ ಕೇಳುತ್ತಲೇ ಬೆಳೆದು ಬಂದಿದ್ದೇವೆ. ಆದರೆ

**ಗ್ರಾಹಕರು ನಮ್ಮ ಮಹತ್ವದ ಗೌರವಾನ್ವಿತ ಅತಿಥಿಗಳು. ಅವರು ನಮ್ಮನ್ನು ಅವಲಂಬಿಸಿಲ್ಲ, ನಾವು ಅವರನ್ನು ಅವಲಂಬಿಸಿದ್ದೇವೆ. ಅವರೇ ನಮ್ಮ ಉದ್ದೇಶಗಳ ಸ್ಫೂರ್ತಿ. ನಮ್ಮ ವ್ಯವಹಾರಗಳಿಗೆ ಅವರು ಹೊರಗಿನವರಲ್ಲ, ಅವರೇ ನಮ್ಮ ವ್ಯವಹಾರದ ಮುಖ್ಯ ಅಂಗ. ನಾವು ಅವರಿಗೆ ನೀಡುವ ಸೇವೆ ಅವರಿಗೆ ಮಾಡಿದ ಉಪಕಾರವಲ್ಲ. ಅವರಿಗೆ ಸೇವೆ ಸಲ್ಲಿಸಲು ನಮಗೆ ಅವಕಾಶ ನೀಡಿ ಅವರೇ ನಮಗೆ ಉಪಕರಿಸಿದಂತಾಗುತ್ತದೆ. RBI Act, NABARD Act, Banking Regulation Act, Negotiable Instruments Act... ಇವುಗಳಲ್ಲಿ "ಗ್ರಾಹಕ" ಎಂಬ ಪದದ ಬಗ್ಗೆ ವ್ಯಾಖ್ಯಾನ ಇಲ್ಲ. ಆದರೆ ಅನೇಕ ನ್ಯಾಯಾಲಯಗಳು ನೀಡಿರುವ ತೀರ್ಪುಗಳ ಹಿನ್ನೆಲೆಯಲ್ಲಿ... ಒಬ್ಬ ವ್ಯಕ್ತಿ ಬ್ಯಾಂಕಿನಲ್ಲಿ ಖಾತೆಯನ್ನು ತೆರೆದ ಕೂಡಲೇ ಆ ಬ್ಯಾಂಕಿನ 'ಗ್ರಾಹಕ' ಆಗುತ್ತಾನೆ. ಆಗ... ಬ್ಯಾಂಕ್ ಮತ್ತು ಗ್ರಾಹಕನ ನಡುವೆ ಪರಸ್ಪರ ಒಪ್ಪಂದ (Contract) ಏರ್ಪಡುತ್ತದೆ. ಈ ಒಪ್ಪಂದದ ಪ್ರಕಾರ Banker's Lien, Duty of Confidentiality... ಇತ್ಯಾದಿಗಳು ಬ್ಯಾಂಕಿಗೆ ಅನ್ವಯವಾದರೆ, ಬ್ಯಾಂಕಿನ ಠೇವಣಾತಿ ಮತ್ತು ಸಾಲದ ನಿಯಮಗಳು ಇತ್ಯಾದಿ... ಗ್ರಾಹಕನಿಗೆ ಅನ್ವಯವಾಗುತ್ತವೆ.**

ವಾಣಿಜ್ಯ ಕ್ಷೇತ್ರದಲ್ಲಿ... ಇವರೆಲ್ಲರನ್ನು ಮೀರಿಸಿದ "ಗ್ರಾಹಕ ದೇವೋಭವ" ಎಂಬ ಮಂತ್ರ ಇಡೀ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ, ಎಲ್ಲ ದೇಶಗಳಲ್ಲಿ, ಎಲ್ಲ ಹಣಕಾಸು ಸಂಸ್ಥೆಗಳಲ್ಲಿ ಪ್ರತಿ ದಿನವೂ, ಪ್ರತಿ ಗಳಿಗೆಯೂ, ಪ್ರತಿ ವ್ಯಕ್ತಿಯ ಕಿವಿಯಲ್ಲಿ... ಪ್ರತಿಧ್ವನಿಸುತ್ತಿದೆ. 21ನೇ ಶತಮಾನದ ಈ ಜಾಗತೀಕರಣದ ಯುಗದಲ್ಲಿ... ಗ್ರಾಹಕ ಎಲ್ಲ ವ್ಯಾವಹಾರಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿದ್ದಾನೆ.

ಗ್ರಾಹಕ...! ಮೂರು ಅಕ್ಷರಗಳ ಪದ. ಆದರೆ... ಈ ಪದ ಕೈಗಾರಿಕಾ ಕ್ಷೇತ್ರದಲ್ಲಿ, ಉದ್ಯಮ ರಂಗದಲ್ಲಿ, ಬ್ಯಾಂಕಿಂಗ್ ವಲಯದಲ್ಲಿ ನಿಜಕ್ಕೂ ಕ್ರಾಂತಿ ಮಾಡುತ್ತಿದೆ. ಈ ಗ್ರಾಹಕನನ್ನು ಉಳಿಸಿಕೊಳ್ಳಲು... ಸಣ್ಣ ವ್ಯಾಪಾರ ಸಂಸ್ಥೆಯಿಂದ ಹಿಡಿದು... ಅಂತಾರಾಷ್ಟ್ರೀಯ ಕಂಪೆನಿಗಳು ಮಾಡುತ್ತಿರುವ ಸಾಹಸ ಅಷ್ಟಿಷ್ಟಲ್ಲ. ಎಷ್ಟೊಂದು ಪ್ರಚಾರ ತಂತ್ರಗಳು! ಒಂದೊಂದು ಸೆಕೆಂಡಿಗೂ ಒಂದೊಂದು ಜಾಹೀರಾತು. ಈ ಗ್ರಾಹಕನನ್ನು ಆಕರ್ಷಿಸಲು ಲಕ್ಷಗಟ್ಟಲೆ ಹಣವನ್ನು ಖರ್ಚು ಮಾಡಲಾಗುತ್ತಿದೆ.

ಗ್ರಾಹಕನ ಪ್ರಾಮುಖ್ಯತೆಯನ್ನು ಇನ್ನೂ ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದರೆ... ಒಮ್ಮೆ ಬ್ಯಾಂಕಿಂಗ್ ಕ್ಷೇತ್ರದ ಕಡೆ ನೋಡಬೇಕಾಗುತ್ತದೆ.

ಸುಮಾರು ಎರಡು ದಶಕಗಳ ಹಿಂದೆ ಗ್ರಾಹಕರು ಬ್ಯಾಂಕ್ ಇರುವ ಸ್ಥಳಕ್ಕೆ ಬಂದು ತಮ್ಮ ವ್ಯವಹಾರಗಳನ್ನು ನಡೆಸಬೇಕಾಗಿತ್ತು. ಇದು ಅವರ ಶ್ರಮ ಮತ್ತು ಸಮಯವನ್ನು ಬೇಡುತ್ತಿತ್ತು. ಆದರೆ ಇಂದು ಅದೇ ಗ್ರಾಹಕರು ಬ್ಯಾಂಕಿನ ಹೊರಗಡೆಯೇ... ATM/AAA Banking/Anyhow Banking ಮೂಲಕ 24/7 ಅವಧಿಯೂ ತಮ್ಮ ವ್ಯವಹಾರಗಳನ್ನು ನಡೆಸುತ್ತಿದ್ದಾರೆ. ಮ್ಯಾನೇಜರ್ ಮತ್ತು ಕ್ಯಾಷಿಯರ್‌ನ ಅಗತ್ಯವೇ ಇಲ್ಲವೇನೋ ಎಂಬಂತೆ ಸಮಯವನ್ನು ಉಳಿಸಿಕೊಳ್ಳುತ್ತಿದ್ದಾರೆ. ಈಗ ಬ್ಯಾಂಕುಗಳು ಮೊಬೈಲ್ ಬ್ಯಾಂಕಿಂಗ್ ಮೂಲಕ, ಗ್ರಾಹಕರು ಹೋದ ಕಡೆಯೆಲ್ಲ ಅವರೊಂದಿಗೆ ಹೋಗುತ್ತಿವೆ. ಇನ್ನು ಮುಂದೆ ಗ್ರಾಹಕರ ಮನೆ ಬಾಗಿಲಿಗೆ ಹೋಗಿ ಸೇವೆ ನೀಡುವ ಅನಿವಾರ್ಯತೆಯೂ ಬರಬಹುದು. ICICI ಬ್ಯಾಂಕು ತನ್ನ ಗ್ರಾಹಕರ ಧ್ವನಿಯ ಏರಿಳಿತ, ಮಾತಿನ ವೇಗ, ಉಚ್ಚಾರ ಶೈಲಿಯನ್ನು ಆಧರಿಸಿ ಪಾಸ್‌ವರ್ಡ್ ತಯಾರಿಸಿದೆ. ಮೊಬೈಲ್ ಬ್ಯಾಂಕಿಂಗ್ ನಡೆಸುವ ಈ ಬ್ಯಾಂಕಿನ 3.3 ಕೋಟಿ ಗ್ರಾಹಕರು ಇನ್ನು ಮುಂದೆ ಅವರ ಧ್ವನಿಯನ್ನೇ ಪಾಸ್‌ವರ್ಡ್ ಆಗಿ ಬಳಸುವ ಸೌಲಭ್ಯವನ್ನು ಹೊಂದಿದ್ದಾರೆ. 16 ಅಂಕಿಗಳ ಕಾರ್ಡ್ ನಂಬರ್ ಹಾಗೂ 4 ಅಂಕಿಗಳ ಪಾಸ್‌ವರ್ಡ್ ಬಳಕೆಗೆ ಇನ್ನು ಮುಂದೆ ಗುಡ್‌ಬೈ ಹೇಳಲಾಗುತ್ತದೆ. ಅದೇ ರೀತಿ ಇಂಡಸ್‌ಇಂಡ್ ಬ್ಯಾಂಕ್ ಇತ್ತೀಚೆಗೆ Biometric ATM ಪ್ರಾರಂಭಿಸಿದೆ.

ಈ ಎ.ಟಿ.ಎಂ.ನಲ್ಲಿ ಪಾಸ್‌ವರ್ಡ್ ಬದಲು ಫಿಂಗರ್ ಪ್ರಿಂಟ್ ಸಾಕು. ಎಟಿಎಂ ಕಾರ್ಡು ಬೇಡ, ಪಿನ್ ಸಂಖ್ಯೆಯೂ ಬೇಡ. ತೋರುಬೆರಳಿನ ತುದಿಯ ತಿದಿಯೊತ್ತಿದರೆ ಸಾಕು. ಒಬ್ಬರ ವ್ಯವಹಾರ ಮತ್ತೊಬ್ಬರು ಮಾಡಲು ಸಾಧ್ಯವಿಲ್ಲ. ಫೋರ್ಜರಿ, ಸುಳ್ಳು ದಾಖಲಾತಿಗಳ ಭಯವಿಲ್ಲ. ಸುರಕ್ಷೆಯೂ ಹೌದು...




ಸುಲಭವೂ ಹೌದು. ಇದು ಗ್ರಾಹಕರಿಗೆ ನೀಡುವ ಹೊಸ ರೀತಿಯ ಸೇವೆಯಾಗಿದೆ. ಇವೆಲ್ಲವೂ ಕೇವಲ ಗ್ರಾಹಕರಿಗಾಗಿ ಮಾತ್ರ! ಎಂಬುದನ್ನು ನೆನಪಿಡಬೇಕು. ಲಂಡನ್ನಿನ ಬ್ಯಾಂಕೊಂದರ ಮ್ಯಾನೇಜರ್ ತನ್ನ ಬ್ಯಾಂಕಿನ ಯಾವುದೇ ಗ್ರಾಹಕರ ಮನೆಯಲ್ಲಿ ಮಗುವೊಂದು ಜನಿಸಿದ ವಿಷಯ ತಿಳಿದ ಕೂಡಲೇ... ಒಂದು ಬೊಕ್ಕೆ ತೆಗೆದುಕೊಂಡು ಹೋಗಿ ಆ ಮಗುವನ್ನು ಅಭಿನಂದಿಸಿ ಬರುತ್ತಾನೆ. ಏಕೆ ಹೀಗೆ? ಎಂದು ಅವನನ್ನು ಕೇಳಿದರೆ "Today's baby is my future customer" ಎನ್ನುತ್ತಾನೆ. ನೋಡಿ... ಗ್ರಾಹಕನಿಗೆ ಎಷ್ಟೊಂದು ಮರ್ಯಾದೆ!

ಹೌದು! ಗ್ರಾಹಕನಿಗೆ ಹೆಚ್ಚಿನ ಗೌರವ. ಏಕೆಂದರೆ ಗ್ರಾಹಕನಿಲ್ಲದೆ ಹೋದರೆ... ಇಡೀ ವ್ಯವಹಾರವೇ ಸ್ಥಗಿತವಾಗಿ ಬಿಡುತ್ತದೆ. ಗ್ರಾಹಕನಿಲ್ಲದ ವ್ಯವಹಾರವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ... Retain the Customer ಎಂಬುದು ಪ್ರತಿ ವ್ಯಾವಹಾರಿಕ ಸಂಸ್ಥೆಯ ಘೋಷವಾಕ್ಯವಾಗಿದೆ. ಈ ಗ್ರಾಹಕನ ಮಹತ್ತತೆಯ ಬಗ್ಗೆ ಗಾಂಧೀಜಿಯವರು ಬಹಳ ಹಿಂದೆಯೇ ಈ ರೀತಿ ಹೇಳಿದ್ದಾರೆ:

ಗ್ರಾಹಕರು ನಮ್ಮ ಮಹತ್ವದ ಗೌರವಾನ್ವಿತ ಅತಿಥಿಗಳು. ಅವರು ನಮ್ಮನ್ನು ಅವಲಂಬಿಸಿಲ್ಲ, ನಾವು ಅವರನ್ನು ಅವಲಂಬಿಸಿದ್ದೇವೆ. ಅವರೇ ನಮ್ಮ ಉದ್ದೇಶಗಳ ಸ್ಫೂರ್ತಿ. ನಮ್ಮ ವ್ಯವಹಾರಗಳಿಗೆ ಅವರು ಹೊರಗಿನವರಲ್ಲ, ಅವರೇ ನಮ್ಮ ವ್ಯವಹಾರದ ಮುಖ್ಯ ಅಂಗ. ನಾವು ಅವರಿಗೆ ನೀಡುವ ಸೇವೆ ಅವರಿಗೆ ಮಾಡಿದ ಉಪಕಾರವಲ್ಲ. ಅವರಿಗೆ ಸೇವೆ ಸಲ್ಲಿಸಲು ನಮಗೆ ಅವಕಾಶ ನೀಡಿ ಅವರೇ ನಮಗೆ ಉಪಕರಿಸಿದಂತಾಗುತ್ತದೆ.

RBI Act, NABARD Act, Banking Regulation Act, Negotiable Instruments Act... ಇವುಗಳಲ್ಲಿ "ಗ್ರಾಹಕ" ಎಂಬ ಪದದ ಬಗ್ಗೆ ವ್ಯಾಖ್ಯಾನ ಇಲ್ಲ. ಆದರೆ ಅನೇಕ ನ್ಯಾಯಾಲಯಗಳು ನೀಡಿರುವ ತೀರ್ಪುಗಳ ಹಿನ್ನೆಲೆಯಲ್ಲಿ...

ಒಬ್ಬ ವ್ಯಕ್ತಿ ಬ್ಯಾಂಕಿನಲ್ಲಿ ಖಾತೆಯನ್ನು ತೆರೆದ ಕೂಡಲೇ ಆ ಬ್ಯಾಂಕಿನ 'ಗ್ರಾಹಕ' ಆಗುತ್ತಾನೆ. ಆಗ... ಬ್ಯಾಂಕ್ ಮತ್ತು ಗ್ರಾಹಕನ ನಡುವೆ ಪರಸ್ಪರ ಒಪ್ಪಂದ (Contract) ಏರ್ಪಡುತ್ತದೆ. ಈ ಒಪ್ಪಂದದ ಪ್ರಕಾರ Banker's Lien, Duty of Confidentiality... ಇತ್ಯಾದಿಗಳು ಬ್ಯಾಂಕಿಗೆ ಅನ್ವಯವಾದರೆ, ಬ್ಯಾಂಕಿನ ಠೇವಣಾತಿ ಮತ್ತು ಸಾಲದ ನಿಯಮಗಳು ಇತ್ಯಾದಿ... ಗ್ರಾಹಕನಿಗೆ ಅನ್ವಯವಾಗುತ್ತವೆ.

ಸಹಕಾರಿಗಳ ಸದಸ್ಯರು... ಆಯಾ ಸಹಕಾರಿಯ ಉಪವಿಧಿಯಲ್ಲಿ ನಿರ್ದಿಷ್ಟ ಪಡಿಸಿರುವ ಕನಿಷ್ಠ ಮಟ್ಟದ ಸಹಕಾರಿಯ ಸೇವೆಯನ್ನು ಸತತ ಎರಡು ಸಹಕಾರ ವರ್ಷಗಳವರೆಗೆ ಬಳಸಿಕೊಂಡಿಲ್ಲದಿದ್ದರೆ ಅಥವಾ ಸಹಕಾರಿಯ ಮೂರು ನಿರಂತರ ಸಾಮಾನ್ಯ ಸಭೆಗಳಿಗೆ ಹಾಜರಾಗಿಲ್ಲದಿದ್ದರೆ, ಸದಸ್ಯರಾಗಿ ಮುಂದುವರೆಯಲು ಅನರ್ಹತೆ ಉಂಟಾಗುತ್ತದೆ ಎಂಬುದು ಎಲ್ಲರಿಗೂ ತಿಳಿದಿದೆ. ಸಹಕಾರಿಗಳು ಇದನ್ನು ಒಂದು ಅವಕಾಶವನ್ನಾಗಿ ಉಪಯೋಗಿಸಿಕೊಂಡು, ಈ ಅಂಶಗಳನ್ನು ಸದಸ್ಯರ ಗಮನಕ್ಕೆ ತಂದು ತಮ್ಮ ವ್ಯವಹಾರದ ಅಭಿವೃದ್ಧಿಗಾಗಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ. ಕನಿಷ್ಠ ಸೇವೆಗಳು ಯಾವುವು ಎಂಬುದರ ಬಗ್ಗೆ ಉಪನಿಬಂಧನೆಗಳಲ್ಲಿ ಸ್ಪಷ್ಟ ಪಡಿಸಬೇಕಾಗುತ್ತದೆ. ಇದನ್ನು ಸದಸ್ಯರ ವ್ಯಾವಹಾರಿಕ ಜವಾಬ್ದಾರಿ ಎಂದು ಕರೆಯಬಹುದಾಗಿದೆ.

**ಉದಾಹರಣೆಗೆ :** ಒಂದು ಸಹಕಾರಿಯ ಸದಸ್ಯ ತನ್ನ ಉಳಿತಾಯ ಖಾತೆಯಲ್ಲಿ ಕನಿಷ್ಠ ತಿಂಗಳಿಗೆ ಒಂದರಂತೆ 12 ವಹಿವಾಟು ನಡೆಸುವುದು ಅಥವಾ ಚಾಲ್ತಿ ಖಾತೆಯಲ್ಲಿ ಕನಿಷ್ಠ ತಿಂಗಳಿಗೆ ಎರಡರಂತೆ ಒಟ್ಟು 24 ವಹಿವಾಟು ನಡೆಸುವುದು ಅಥವಾ ಕನಿಷ್ಠ 1 ವರ್ಷ ರೂ.5000/–ಗಳವರೆಗೆ ಠೇವಣಿ ತೊಡಗಿಸುವಿಕೆ ಅಥವಾ 1 ವರ್ಷದಲ್ಲಿ ಕನಿಷ್ಠ ರೂ.5000/–ಗಳವರೆಗೆ ಖರೀದಿ ಅಥವಾ 1 ವರ್ಷದಲ್ಲಿ ಕನಿಷ್ಠ ರೂ.5000/–ಗಳವರೆಗೆ ಯಾವುದೇ ವ್ಯವಹಾರ ನಡೆಸುವಂತೆ... ಬೈಲಾದಲ್ಲಿ ಅಳವಡಿಸಿಕೊಳ್ಳಬಹುದು.

ಇದರಿಂದಾಗಿ ಎರಡು ಉದ್ದೇಶಗಳನ್ನು ಈಡೇರಿಸಿದಂತಾಗುತ್ತದೆ. ಮೊದಲನೆಯದಾಗಿ ನಿಷ್ಕ್ರಿಯ ಸದಸ್ಯರನ್ನು ಎಚ್ಚರಿಸುವುದಲ್ಲದೇ, ಅವರ ಕ್ರಿಯಾತ್ಮಕ ಭಾಗವಹಿಸುವಿಕೆಗೆ ಉತ್ತೇಜನ ನೀಡುತ್ತದೆ. ಇದರ ಜತೆ ಜತೆಗೆ ಸಹಕಾರಿಯ ವ್ಯವಹಾರ ಅಭಿವೃದ್ಧಿಗೂ ಪೂರಕ ವಾತಾವರಣವನ್ನು ಉಂಟು ಮಾಡುತ್ತದೆ ಹಾಗೂ ಸಹಕಾರ ತತ್ವಗಳ ಮೂರನೇ ತತ್ವವಾದ ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಪಾಲು... ಅರ್ಥಪೂರ್ಣವಾಗಿ ಅನುಷ್ಠಾನಗೊಳ್ಳುತ್ತದೆ. ಆದರೆ ಸಹಕಾರಿಗಳು ತಮ್ಮ ಉಪವಿಧಿಗಳಲ್ಲಿ ನಿಗದಿಮಾಡುವ ಕನಿಷ್ಠ ಸೇವೆಗಳನ್ನು ಸದಸ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ಗುಣಮಟ್ಟದ ನಿರ್ವಹಣೆ ಮುಖ್ಯವಾಗುತ್ತವೆ. ಇದು ಅನಿವಾರ್ಯವೂ ಹೌದು! ಇಂದು ಸದಸ್ಯರಿಗೆ ಗುಣಮಟ್ಟದ ವಸ್ತುಗಳು ಮತ್ತು ಸೇವೆಗಳು ಬೇಕಾಗಿವೆ. ಅವರಿಗೆ ತೃಪ್ತಿ ನೀಡುವಂತಹ ವಸ್ತು ಮತ್ತು ಸೇವೆಗಳಿಗೆ ಪ್ರಾಶಸ್ತ್ಯ ನೀಡುತ್ತಾರೆ.

ಆ ವಸ್ತು ಮತ್ತು ಸೇವೆಗಳು ಯೋಗ್ಯ ಬೆಲೆಗೆ ಮತ್ತು ಸಕಾಲದಲ್ಲಿ ದೊರೆಯಬೇಕು. ಆಗ ಗ್ರಾಹಕರು ಅವುಗಳ ಆರಾಧಕರಾಗುತ್ತಾರೆ. ಯಾವ ಸಂಸ್ಥೆಗಳು ಗ್ರಾಹಕರಿಗೆ ಉತ್ತಮ ಗುಣಮಟ್ಟದ ಸೇವೆ ನೀಡುತ್ತವೆಯೋ ಅವು ಮಾರುಕಟ್ಟೆಯಲ್ಲಿ ತಮ್ಮ ಹೆಸರನ್ನು ನಿರಂತರವಾಗಿ ಉಳಿಸಿಕೊಳ್ಳುತ್ತವೆ. ಆದ್ದರಿಂದ ಪ್ರತಿಯೊಂದು ಸಹಕಾರಿಯ ಚಟುವಟಿಕೆಗಳು ಸದಸ್ಯ ಕೇಂದ್ರಿತ, ಸದಸ್ಯ ನಿರ್ದೇಶಿತ ಮತ್ತು ಸದಸ್ಯ ಅಗತ್ಯತೆ... ಆಗಬೇಕಾದ ಅನಿವಾರ್ಯತೆ ಇದೆ. ಗುಣಮಟ್ಟದ ಸೇವೆ ಬಹಳ ಮುಖ್ಯವಾಗುತ್ತದೆ.

**ಸಹಕಾರಿಗಳಲ್ಲಿ ಗ್ರಾಹಕ ಸಂಬಂಧಗಳ ನಿರ್ವಹಣೆಯ ಬಗ್ಗೆ ಕೆಲವು ಟಿಪ್ಸ್‌ಗಳು;**

1. ಯಾವಾಗಲೂ ನಗುಮುಖದಿಂದ ಇರುವುದು, ಒಳ್ಳೆಯ ರೀತಿಯಲ್ಲಿ ಮಾತನಾಡುವುದು, ಗ್ರಾಹಕರು ಹೇಳುವುದನ್ನು ಚೆನ್ನಾಗಿ ಕೇಳಿಸಿಕೊಳ್ಳುವುದು... ಗ್ರಾಹಕ ಸಂಬಂಧಗಳ ಉತ್ತಮ ಲಕ್ಷಣಗಳು. ಆದರೆ ಈ ಅಂಶಗಳು ಕೇವಲ ಶೇ.10 ರಿಂದ 15ರಷ್ಟು ಮಾತ್ರ ಫಲಿತಾಂಶ ನೀಡುತ್ತವೆ. ಇವುಗಳ ಜೊತೆಗೆ ಸಂಸ್ಥೆಯ ವ್ಯವಹಾರದ ಸರಳ ನಿಯಮಗಳು, ತಾಂತ್ರಿಕ ಸೌಲಭ್ಯಗಳು ಮತ್ತು ಸಂಸ್ಥೆಯ ಪರಿಸರ ಬಹಳ ಮುಖ್ಯವಾಗುತ್ತವೆ. ಸಿಬ್ಬಂದಿಗಳ ಅಥವಾ ಮಾರಾಟಗಾರರ ವರ್ತನೆ ಶೇ.85ರಷ್ಟು ಗ್ರಾಹಕ ಸಂಬಂಧಗಳನ್ನು ಉತ್ತಮಗೊಳಿಸುತ್ತವೆಂದು, ಅವರುಗಳ ಅನುಚಿತ ವರ್ತನೆಯಿಂದ ಶೇ.68ರಷ್ಟು ಗ್ರಾಹಕ ಸಂಬಂಧಗಳು ಹಾಳಾಗುತ್ತವೆಂದು ವ್ಯಾವಹಾರಿಕ ತಜ್ಞರು ಹೇಳುತ್ತಾರೆ.
2. ನೂರು ಗ್ರಾಹಕರ ಪೈಕಿ ನಾಲ್ಕು ಗ್ರಾಹಕರು ಮಾತ್ರ ತಮ್ಮ ಅತೃಪ್ತಿಯನ್ನು ನೇರವಾಗಿ ವ್ಯಕ್ತಪಡಿಸುತ್ತಾರೆ. ಉಳಿದ 96 ಗ್ರಾಹಕರು ಸುಮ್ಮನಿರುತ್ತಾರೆಂಬ ಅಭಿಪ್ರಾಯ ಇದೆ. ಹಾಗೆಂದ ಮಾತ್ರಕ್ಕೆ 96 ಗ್ರಾಹಕರೆಲ್ಲರೂ... ಸಂಸ್ಥೆಯೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದಾರೆಂದು ಹೇಳುವಂತಿಲ್ಲ. ಅದೇ ರೀತಿ ಗ್ರಾಹಕರು ನೀಡುವ ದೂರುಗಳನ್ನು ಪರಿಹರಿಸಿದರೆ, ದೂರು ನೀಡಿದ ಗ್ರಾಹಕರ ಪೈಕಿ ಶೇ.70ರಷ್ಟು ಗ್ರಾಹಕರು ಸಂಸ್ಥೆಯೊಂದಿಗೆ ಮುಂದುವರೆಯುತ್ತಾರೆ. ಅದಕ್ಕಿಂತಲೂ... ಅವರ ದೂರುಗಳನ್ನು ಸಕಾಲದಲ್ಲಿ ಪರಿಹರಿಸಿದರೆ ಈ ಸಂಖ್ಯೆ ಶೇ.90ರಷ್ಟಾಗುತ್ತದೆ.
3. ಗ್ರಾಹಕರ ಸೇವೆಯಲ್ಲಿ ಶೇ.5ರಷ್ಟು ಕೊರತೆ ಕಂಡರೂ ಶೇ.25ರಷ್ಟು ಸಂಸ್ಥೆಯ ಲಾಭ ಕಡಿಮೆಯಾಗುತ್ತದೆ. ಗ್ರಾಹಕರ ಉತ್ತಮ ಸೇವೆಯಿಂದ ಶೇ.52ರಷ್ಟು ಸಂಸ್ಥೆಯ ವ್ಯವಹಾರ ಅಭಿವೃದ್ಧಿಯಾಗುತ್ತದೆ ಎಂಬುದು ತಜ್ಞರ ಅಭಿಮತ. ಏಕೆಂದರೆ... A satisfied customer will bring another 8 customers; An unsatisfied customer will take away another 16 customers.
4. ಸಹಕಾರಿಗಳು ತಮ್ಮ ಗ್ರಾಹಕರೊಂದಿಗೆ ನಿರಂತರ ಸಂಪರ್ಕ ಹೊಂದಿರುವುದು ಬಹಳ ಮುಖ್ಯವಾಗುತ್ತದೆ. ಕೇವಲ ಮಹಾಸಭೆಯ ದಿನ ಸದಸ್ಯರನ್ನು ಭೇಟಿ ಮಾಡುವ ಈಗಿನ ಪದ್ಧತಿಯ ಜತೆ ಜತೆಗೆ ಕನಿಷ್ಠ 3 ತಿಂಗಳಿಗೊಮ್ಮೆ ಗ್ರಾಹಕರ ಸಭೆ, ಠೇವಣಿ ಸಪ್ತಾಹ ಮುಂತಾದ ಕಾರ್ಯಕ್ರಮಗಳನ್ನು ನಡೆಸುವುದರಿಂದ ಗ್ರಾಹಕರು ಸಂಸ್ಥೆಗೆ ಹತ್ತಿರವಾಗುತ್ತಾರೆ. ಗ್ರಾಹಕ ಸಭೆಗಳಲ್ಲಿ ಅವರುಗಳು ನೀಡುವ ದೂರುಗಳು ಅಥವಾ ತಿಳಿಸುವ ಸಲಹೆಗಳು ಆಡಳಿತಗಾರರಿಗೆ ಮಾರ್ಗದರ್ಶನ ರೂಪದಲ್ಲಿ ಒದಗಿಬರುತ್ತವೆ. ಇದು Free Management Consultancy ಆಗುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್ ಇತ್ತೀಚೆಗೆ ಎಲ್ಲ ಬ್ಯಾಂಕುಗಳಿಗೆ ಒಂದು ಸುತ್ತೋಲೆಯನ್ನು ಕಳಿಸಿ ಗ್ರಾಹಕರನ್ನು ಆಕರ್ಷಿಸಲು ಕೆಳಗಿನಂತೆ ನಾಮಫಲಕವನ್ನು ವ್ಯವಸ್ಥೆ ಮಾಡಲು ತಿಳಿಸಿದೆ.

ಗ್ರಾಹಕರಲ್ಲಿ ವಿನಂತಿ... "ನಮ್ಮ ಸೇವೆಯಲ್ಲಿ ನ್ಯೂನತೆಗಳಿದ್ದರೆ ನಮಗೆ ತಿಳಿಸಿರಿ. ಸೇವೆಯಿಂದ ತೃಪ್ತಿಗೊಂಡರೆ ತಮ್ಮಂತಹ ಹತ್ತಾರು ಗ್ರಾಹಕರನ್ನು ನಮಗೆ ಪರಿಚಯಿಸಿರಿ."

ಇದರಿಂದಾಗಿ ಗ್ರಾಹಕನ ಸ್ಥಾನ ಬಹಳ ಮಹತ್ವವನ್ನು ಪಡೆದಿದೆ. ಗ್ರಾಹಕನಿಲ್ಲದೆ ಯಾವ ವ್ಯಾವಹಾರಿಕ ಸಂಸ್ಥೆಯೂ ಯಶಸ್ವಿಯಾಗುವುದಿಲ್ಲ.

# ವಾರ್ಷಿಕ ಸಾಮಾನ್ಯ ಸಭೆ (ಸರ್ವ ಸದಸ್ಯರ ಸಭೆ)

ಶರಣಪ್ಪಾ ರೋಜಾ, ಕಲಬುರಗಿ

**ಸೌಹಾರ್ದ ಸಹಕಾರಿ ಒಂದು ವರ್ಷದಲ್ಲಿ ಕೈಕೊಂಡ ಕಾರ್ಯಚಟುವಟಿಕೆ ತೃಪ್ತಿಕರವಾಗಿದೆಯೇ? ಲಾಭದಲ್ಲಿ ನಡೆದಿದೆಯೇ? ಯಾವುದೇ ಅವ್ಯವಹಾರ ನಡೆದಿಲ್ಲ ಎಂಬ ಬಗ್ಗೆ ಹಾಗೂ ಸದಸ್ಯರು ತೊಡಗಿಸಿದ ಶೇರು ಬಂಡವಾಳ, ಠೇವಣಿ ಸುರಕ್ಷಿತವಾಗಿದೆಯೇ? ಈ ಎಲ್ಲಾ ಅಂಶಗಳನ್ನು ಪಾರದರ್ಶಕವಾಗಿ ಅವಲೋಕನ ಮಾಡುವ ಅವಕಾಶ ಸದಸ್ಯರಿಗೆ ದೊರೆಯುತ್ತದೆ. ಅಲ್ಲದೇ, ಸದಸ್ಯರ ಹಿತದೃಷ್ಟಿಯಿಂದ ಕೈಕೊಳ್ಳಬಹುದಾದ ರಚನಾತ್ಮಕ ಸಲಹೆ ಸೂಚನೆಗಳನ್ನು ಈ ಸಭೆಯಲ್ಲಿ ನೀಡಲು ಸದಸ್ಯರಿಗೆ ಒಂದು ಅವಕಾಶ ಕೂಡಾ ಸಿಗುತ್ತದೆ.**

ಸೌಹಾರ್ದ ಸಹಕಾರಿ ಕಾಯ್ದೆ ಅಡಿ ನೋಂದಣಿಯಾದ ಪ್ರತಿಯೊಂದು ಸೌಹಾರ್ದ ಸಹಕಾರಿಯು ವರ್ಷಕ್ಕೊಮ್ಮೆ ಸರ್ವ ಸದಸ್ಯರ ಸಭೆ ಜರುಗಿಸಬೇಕೆಂಬ ಶಾಸನಬದ್ಧ ನಿಯಮವಿದೆ. (ಏಪ್ರಿಲ್ 1 ರಿಂದ ಸೆಪ್ಟೆಂಬರ್ 25ರ ಅವಧಿಯವರೆಗೆ) ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಸರಕಾರದ ಯಾವುದೇ ಹಣಕಾಸು ನೆರವು ದೊರೆಯುವುದಿಲ್ಲ. ಸದರಿ ಸಂಸ್ಥೆಗಳಲ್ಲಿ ಇರುವ ಬಂಡವಾಳ ಸದಸ್ಯರಿಂದ ಶೇರು ರೂಪದಲ್ಲಿ ಮತ್ತು ಠೇವಣಿ ರೂಪದಲ್ಲಿ ಸಂಗ್ರಹಿಸಿದ ಹಣವಾಗಿರುತ್ತದೆ. ಅಲ್ಲದೇ, ಸದರಿ ಸಂಸ್ಥೆಗಳ ಮೇಲೆ ಯಾವುದೇ ಸರಕಾರದ ನಿಯಂತ್ರಣ ಕೂಡಾ ಇರುವುದಿಲ್ಲ. ಈ ಕಾರಣಕ್ಕಾಗಿ ಸದಸ್ಯರು ತಾವು ಸಹಕಾರಿಗಳಲ್ಲಿ ಹೂಡಿದ ಬಂಡವಾಳ ಸುರಕ್ಷಿತವಾಗಿದೆಯೇ? ಎಂಬ ಬಗ್ಗೆ ಕಾಲ ಕಾಲಕ್ಕೆ ಮೇಲ್ವಿಚಾರಣೆ ಮಾಡುವಂತಹ ಗುರುತರವಾದ ಜವಾಬ್ದಾರಿಯನ್ನು ಹೊಂದಿರುತ್ತಾರೆ. ತಾವು ಸದಸ್ಯರಾಗಿರುವ ಸಹಕಾರಿ ಕಾರ್ಯಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂಬುದು ಸಹಕಾರಿ ತತ್ವಗಳಲ್ಲಿ ಒಂದು ಮುಖ್ಯವಾದ ತತ್ವ. ಆದ- ರೆ, ಬಹಳಷ್ಟು ಸದಸ್ಯರು ಸರ್ವ ಸದಸ್ಯರ ಸಭೆಗೆ ಹಾಜರಾಗುವ ವಿಷಯದಲ್ಲಿ ತಾತ್ಸಾರ ಭಾವನೆ ತಳೆದು ಗೈರು ಹಾಜರಾಗುವುದರಿಂದ ಕೋರಂ ಕೊರತೆ- ಯುಂಟಾಗಿ ಸಹಕಾರಿಗಳ ಸರ್ವ ಸದಸ್ಯರ ಸಭೆ ಮುಂದೂಡಲ್ಪಟ್ಟ ಬಹಳಷ್ಟು ನಿದರ್ಶನಗಳು ನಮ್ಮ ನಿಮ್ಮ ಗಮನಕ್ಕೆ ಸಾಮಾನ್ಯವಾಗಿ ಬಂದಿರುತ್ತವೆ.

ಸಹಕಾರಿಗಳ ಆಡಳಿತ ಮತ್ತು ಅವುಗಳು ಕೈಕೊಳ್ಳುವ ಕಾರ್ಯಚಟುವಟಿಕೆ ಪಾರದರ್ಶಕವಾಗಿ ನಡೆಯಬೇಕೆಂಬುದು ಸರಕಾರದ ಮತ್ತು ಸಾರ್ವಜನಿಕರ ಆಶಯ. ಸರ್ವ ಸದಸ್ಯರ ಸಭೆಗೆ ಕೋರಂ ಕೊರತೆ ಉಂಟಾಗುತ್ತಿರುವ ಅಂಶವನ್ನು ಹಾಗೂ ಸಂಸ್ಥೆಯ ಎಲ್ಲಾ ಸದಸ್ಯರು ಸರ್ವ ಸದಸ್ಯರ ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕೆನ್ನುವ ಉದ್ದೇಶಕ್ಕಾಗಿ ಸರಕಾರವು ಸೌಹಾರ್ದ ಸಹಕಾರಿ ಕಾಯ್ದೆಗೆ ಇತ್ತೀಚಿಗೆ ತಿದ್ದುಪಡಿ ತಂದು ಪ್ರತಿಯೊಬ್ಬ ಸದಸ್ಯನು ಸಹಕಾರಿಯ ನಿರಂತರ 3 ವಾರ್ಷಿಕ ಮಹಾ ಸಭೆಗಳಿಗೆ ಗೈರು ಹಾಜರಾದರೆ ಮತ್ತು ಸಹಕಾರಿ ಒದಗಿಸುವ ಕನಿಷ್ಠ ಸೇವೆಯನ್ನು 2 ವರ್ಷಗಳವರೆಗೆ ಬಳಸಿಕೊಳ್ಳದೇ ಇರುವ ಸದಸ್ಯನ ಸದಸ್ಯತ್ವ ನಿಂತು ಹೋಗುತ್ತದೆ ಎಂಬ ಅಂಶವನ್ನು ಕಾನೂನಿನಲ್ಲಿ ಅಳವಡಿಸಲಾಗಿದೆ.


ಸರ್ವ ಸದಸ್ಯರ ಸಭೆ ಮಹತ್ವದ ಸಭೆಯಾಗಿದ್ದು, ಸದರಿ ಸಭೆಗೆ ಕಾನೂನು, ನಿಯಮ ಮತ್ತು ಬೈಲಾ ಅವಕಾಶಗಳ ಷರತ್ತಿಗೊಳಪಟ್ಟು ಅಂತಿಮ ನಿರ್ಧಾರ ಕೈಕೊಳ್ಳುವ ಸರ್ವೋಚ್ಚ ಅಧಿಕಾರ ಇರುತ್ತದೆ. ಈ ಅಂಶವನ್ನು ಪ್ರತಿಯೊಬ್ಬ ಸಹಕಾರಿ ಗಮನದಲ್ಲಿಟ್ಟು ಕೊಳ್ಳುವುದು ಸೂಕ್ತ ಮತ್ತು ಅವಶ್ಯಕ. ಸರ್ವ ಸದಸ್ಯರ ಸಭೆಗೆ ಹಾಜರಾಗಿ ಸಂಸ್ಥೆಯ ಕಾರ್ಯಚಟುವಟಿಕೆಯಲ್ಲಿ ನೇರವಾಗಿ ಪಾಲ್ಗೊಳ್ಳುವ ಸುವರ್ಣ ಅವಕಾಶ ವರ್ಷಕ್ಕೊಮ್ಮೆ ಮಾತ್ರ ಸದಸ್ಯರಿಗೆ ಲಭ್ಯವಾಗುತ್ತದೆ.

ಸೌಹಾರ್ದ ಸಹಕಾರಿ ಒಂದು ವರ್ಷದಲ್ಲಿ ಕೈಕೊಂಡ ಕಾರ್ಯಚಟುವಟಿಕೆ ತೃಪ್ತಿಕರವಾಗಿದೆಯೇ? ಲಾಭದಲ್ಲಿ ನಡೆದಿದೆಯೇ? ಯಾವುದೇ ಅವ್ಯವಹಾರ ನಡೆದಿಲ್ಲ ಎಂಬ ಬಗ್ಗೆ ಹಾಗೂ ಸದಸ್ಯರು ತೊಡಗಿಸಿದ ಶೇರು ಬಂಡವಾಳ, ಠೇವಣಿ ಸುರಕ್ಷಿತವಾಗಿದೆಯೇ? ಈ ಎಲ್ಲಾ ಅಂಶಗಳನ್ನು ಪಾರದರ್ಶಕವಾಗಿ ಅವಲೋಕನ ಮಾಡುವ ಅವಕಾಶ ಸದಸ್ಯರಿಗೆ ದೊರೆಯುತ್ತದೆ. ಅಲ್ಲದೇ, ಸದಸ್ಯರ ಹಿತದೃಷ್ಟಿಯಿಂದ ಕೈಕೊಳ್ಳಬಹುದಾದ ರಚನಾತ್ಮಕ ಸಲಹೆ ಸೂಚನೆಗಳನ್ನು ಈ ಸಭೆಯಲ್ಲಿ ನೀಡಲು ಸದಸ್ಯರಿಗೆ ಒಂದು ಅವಕಾಶ ಕೂಡಾ ಸಿಗುತ್ತದೆ. ಈ ಅವಕಾಶ ವರ್ಷಕ್ಕೆ ಒಂದೇ ಸಲ ಸಿಗುವುದರಿಂದ ಪ್ರತಿಯೊಬ್ಬ ಸದಸ್ಯ ಈ ಸರ್ವ ಸದಸ್ಯರ ಸಭೆಗೆ ತಪ್ಪದೇ ಹಾಜರಾಗಿ ತನ್ನ ಶಾಸನಬದ್ಧ ಕರ್ತವ್ಯವನ್ನು ನಿರ್ವಹಿಸುವುದು ಅವಶ್ಯಕ ಮತ್ತು ಅನಿವಾರ್ಯ.

ಸರ್ವ ಸದಸ್ಯರ ಸಭೆ ನಿಯಮಾನುಸಾರ ಪಾರದರ್ಶಕವಾಗಿ ಜರುಗಿಸುವ ಮತ್ತು ಕಾನೂನಿನಲ್ಲಿ ನಮೂದಿಸಿದ ಎಲ್ಲಾ ವಿಷಯ ಸೂಚಿಗಳನ್ನು ಸಭೆಯಲ್ಲಿ ಮಂಡಿಸುವ ಹಾಗೂ ಸದಸ್ಯರಿಗೆ ಸಭೆಯಲ್ಲಿ ಮುಕ್ತ ಚರ್ಚೆಗೆ ಅವಕಾಶ ಒದಗಿಸುವ ಗುರುತರವಾದ ಜವಾಬ್ದಾರಿ ಆಡಳಿತ ಮಂಡಳಿಯ ಮೇಲಿರುತ್ತದೆ.

ಸಹಕಾರಿಯ ಸದಸ್ಯರು ಸರ್ವ ಸದಸ್ಯರ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳದೇ ಇರುವುದರಿಂದ ಹಾಗೂ ಸಹಕಾರಿ ಒದಗಿಸುವ ಸೇವೆಯನ್ನು ಪಡೆಯದೇ ಇರುವದರಿಂದ ಇತ್ತೀಚಿಗೆ ಕೆಲವೊಂದು ಸಹಕಾರಿಗಳಲ್ಲಿ ಹಣ ದುರುಪಯೋಗ ಮತ್ತು ಅವ್ಯವಹಾರಗಳು ನಡೆದಿರುವ ಬಗ್ಗೆ ಬೆಳಕಿಗೆ ಬರುತ್ತಿದ್ದು, ಇದು ಸಹಕಾರಿ ಚಳುವಳಿಗೆ ಒಂದು ಕಪ್ಪು ಚುಕ್ಕೆ. ಆದ್ದರಿಂದ, ಸಹಕಾರಿಗಳಲ್ಲಿ ಸದಸ್ಯರಾಗಿದ್ದವರು ಹೆಚ್ಚಿನ ಸಂಖ್ಯೆಯಲ್ಲಿ ಸರ್ವ ಸದಸ್ಯರ ಸಭೆಗೆ ಹಾಜರಾಗಿ ಸೌಹಾರ್ದ ಸಹಕಾರಿ ಸಂಸ್ಥೆಗಳು ಸದಸ್ಯರಿಗೆ ಸಾರ್ವಜನಿಕರಿಗೆ ಸೇವೆ ಒದಗಿಸಿ ಪ್ರಗತಿಪೂರ್ವಕವಾಗಿ ಮುಂದುವರೆದು ಸಹಕಾರಿ ಚಳುವಳಿಗೆ ಕೀರ್ತಿ ತರುವಂತಾಗಲಿ ಎನ್ನುವುದು ಸರ್ವ ಜನತೆಯ ಆಶಯ.

# RBI NEWS - MARCH 2017



**K. Vittal Shetty,** Banking Consultant, kohimavittal@Hotmail.com, Mobile:9845699904

| The next meeting of the MPC is scheduled on April 5 and 6, 2017. | |
|---|---|
| Policy Rates with effect from 04 October 2016. | % |
| POLICY REPO RATE | 6.25% |
| REVERSE REPO RATE | 5.75% |
| MARGINAL STANDING FACILITY RATE | 6.75% |
| BANK RATE | 6.75% |
| Reserve Ratios | % |
| Cash Reserve Ratio | 4.00% |
| Statutory Reserve Ratio | 20.50% |

### RBI releases 'Quarterly Statistics on Deposits and Credit of Scheduled Commercial Banks : December 2016'

RBI released Quarterly Statistics on Deposits and Credit of Scheduled Commercial Banks (SCBs) as on December 31, 2016. The data include Regional Rural Banks (RRBs). The survey covers all types of deposits and total credit classified by states, districts, centers, population groups and bank groups. The data can be directly accessed through the link https://dbie.rbi.org.in/DBIE/dbie.rbi? site = publications #!3.

**Highlights :**

- On a year-on-year (y-o-y) basis, aggregate deposits grew at an accelerated pace in all population groups (except in metropolitan areas) and for all bank groups; on the other hand, however, bank credit decelerated across all population groups and bank groups.
- Term deposits constituted the highest share in aggregate deposits in all population groups, except in rural areas where savings deposits (53.4 per cent) recorded the major share.
- Metropolitan bank branches continued to contribute the largest share of aggregate deposits (51.6 per cent) and total bank credit (65.6 per cent).
- Public sector banks continued to lead, accounting for 70.6 per cent of aggregate deposits and 66.2 per cent of total bank credit.
- The survey revealed a concentration of deposits and credit in seven states, namely, Maharashtra, National Capital Territory (NCT) of Delhi, Tamil Nadu, Karnataka, Uttar Pradesh, West Bengal and Gujarat.
- The credit-deposit (C-D) ratio of all SCBs at all-India level came down to 70.6 per cent by end-December 2016 from 74.5 per cent a quarter ago, with Maharashtra (106.5 per cent), Tamil Nadu (100.8 per cent), Chandigarh (100.0 per cent), Telangana (96.7 per cent), Andhra Pradesh (91.4 per cent) and NCT of Delhi (84.5 per cent) recording C-D ratios above the all-India average.

Financial Literacy by FLCs (Financial Literacy Centres) and rural branches Policy Review

| Date : Mar 31, 2017 | | | | | | | |
|---|---|---|---|---|---|---|---|
| Scheduled Banks' Statement of Position in India as on Friday, March 17, 2017 | | | | | | | |
| (Amount in Billions of) | | | | | | | |
| | | SCHEDULED COMMERCIAL BANKS (Including RRBs) | | | ALL SCHEDULED BANKS | | |
| | | 18-Mar-2016 | 03-MAR-2017 * | 17-MAR-2017 * | 18-Mar-2016 | 03-MAR - 2017 * | 17-MAR-2017 * |
| I | a) Deposits | 93272.9 | 105427.54 | 105420.47 | 95756.35 | 108351.5 | 107395.01 |
| | i) Demand | 8889.96 | 10814.95 | 11612.31 | 9095.81 | 11084.28 | 11794.91 |
| | ii) Time | 84382.94 | 94612.6 | 93808.09 | 86660.54 | 97267.23 | 95600.03 |
| II | CASH | 574.38 | 573.52 | 566.27 | 586.66 | 595.02 | 584.44 |
| III | WITH R.B.I. (B) | 3874.42 | 4322.09 | 4256.89 | 3984.38 | 4443.6 | 4379.28 |
| IV | INVESTMENTS | 26255.09 | 33307.91 | 32076.58 | 27000.89 | 34273.11 | 32703.56 |
| V | BANK CREDIT | 72496.15 | 75160.79 | 75656.75 | 74689.63 | 77541.82 | 76901.18 |

Please refer to our circular FIDD.FLC.BC.No. 18/12.01.018/2015-16 dated January 14, 2016 on guidelines for FLCs and rural branches. In terms of this circular, FLCs and rural branches were advised to conduct two types of camps viz. - Special camps for people newly inducted into the financial system (1 camp per month) for a period of one year and target group specific camps 1 each for five target groups' viz. farmers, small entrepreneurs, school children, senior citizens and SHGs. The one year period for conduct of special camps for people newly inducted into the financial system has come to an end in January 2017.

**2. Given the recent developments on withdrawal of legal tender status of Specified Bank Notes and the focus on going digital, the policy on conduct of camps by FLCs and rural branches of the banks has been revised as under:**

Financial Literacy Centres (FLCs): FLCs are advised to conduct special camps for a period of one year beginning April 1, 2017 on "Going digital" through UPI and *99# (USSD)". Two posters, one on UPI and one on *99# have been prepared for the benefit of the trainers and the audience. The English, Hindi and local language versions of the two posters are available at the financial education webpage of the Bank for download and printing purposes. While the A2 and A3 sizes can be used by trainers, A4 and A5 sizes can be distributed to the general public during the camps.

Besides the special camps on going digital, FLCs will continue to conduct the tailored camps for the different target groups as prescribed in our circular dated January 14, 2016. The tailored content for each target group is currently being prepared and is expected to be shared with banks/FLCs in due course of time. The proposed approach by FLCs and the operational guidelines for conduct of special camps is illustrated in Annex I.

**Rural branches of banks :** Rural branches of banks are henceforth required to conduct only one camp per month (on the Third Friday of each month after branch hours). This camp will cover all the messages that are part of the Financial Awareness Messages (FAME) booklet and the two digital platforms UPI and *99# (USSD). The proposed approach by rural branches is illustrated in Annex I. In case there are two or more rural branches in a village, the LDM may ensure that the rural branches conduct the camps on rotation basis every month.

**Funding support from FIF :** FLCs and rural branches of banks are eligible for funding support for the financial literacy camps to the extent of 60% of the expenditure of the camp subject to a maximum of 15,000/- per camp. For details on funding, please refer circular No. 240/DFIBT-33/2015 dated November 13, 2015 issued by NABARD.

**Reporting mechanism :** The reporting formats prescribed vide circular FIDD.FLC.BC.No. 12/12.01.018/2016-17 dated August 25, 2016 have been modified and the revised reporting formats are as per Annex II (Part A, B and C) for FLCs and Annex III for rural branches. The Annex II quarterly report on FLCs will be submitted by SLBCs/UTLBCs to the respective Regional office of RBI within 20 days from the end of the quarter and Annex III quarterly report on rural branches within 30 days from the end of the quarter.

The above guidelines will come into force from April 1, 2017 and the revised reporting formats will be effective from the quarter ending June 30, 2017. For the quarter ending March 2017, the quarterly returns may be submitted in the format as prescribed in circular FIDD.FLC.BC.No.12/12.01.018/2016-17 dated August 25, 2016.

The impact of the financial literacy camps will be assessed/evaluated on an ongoing basis by the Lead District Officers (LDOs) of Reserve Bank of India.

**Issue of 10 banknotes with improved security features**

RBI will shortly issue 10 denomination banknotes in the Mahatma Gandhi Series-2005 with inset letter 'L' in both the number panels, bearing the signature of Dr. Urjit R. Patel, Governor, Reserve Bank of India, and the year of printing '2017' printed on the reverse of the banknote.

The numerals in both the number panels of these banknotes are in the ascending size from left to right while the first three alpha-numeric characters (prefix) remain constant in size.

All the Banknotes in the denomination of 10 issued by the Bank in the past will continue to be legal tender.

**Financial Literacy Material :** RBI has published a booklet titled FAME (Financial Awareness Messages) to provide basic financial literacy messages for the information of the general public. It contains eleven institution/product neutral financial awareness messages, such as, documents to be submitted while opening a bank account (KYC), importance of budgeting, saving and responsible borrowing, maintaining a good credit score by repaying loans on time, banking at doorstep or at vicinity, knowing how to lodge complaints at the bank and the Banking Ombudsman, usage of electronic remittances, investing money only in registered entities, etc. The aim of this initiative is to create awareness about financial products and services, good financial practices, going digital and consumer protection. The booklet is available in the local languages for download at (https://www.rbi.org.in/commonman/English/Scripts/fame.aspx).

Two posters on UPI (Unified Payment Interface) and *99# (Unstructured Supplementary Service Data) are also available for download in the local languages.

**ESAF Small Finance Bank Limited commences operations :** ESAF Small Finance Bank Limited has commenced

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 24

operations as a small finance bank with effect from March 10, 2017. ESAF Microfinance and Investments Private Limited, Chennai was one of the ten applicants which were issued in-principle approval for setting up a small finance bank, as announced in the press release on September 16, 2015.

**Branches of Bharatiya Mahila Bank Limited to operate as branches of SBI from April 1, 2017 :** All branches of Bharatiya Mahila Bank Limited will function as branches of State Bank of India from April 1, 2017. Customers, including depositors of Bharatiya Mahila Bank Limited will be treated as customers of State Bank of India with effect from April 1, 2017.

The Government of India has issued the Acquisition of Bharatiya Mahila Bank Limited Order 2017. The Order dated March 20, 2017 issued by the Government of India was published under Extraordinary Part II-Section 3-Sub-section (i) in the Gazette of India sanctioning the acquisition of Bharatiya Mahila Bank Limited by State Bank of India in terms of sub section (2) of Section 35 of the State Bank of India Act, 1955 (23 of 1955).

**RBI advisory on E-wallets :** RBI has advised the users of Pre-paid Payment Instruments (PPIs), including mobile and electronic wallets, that only non-bank entities authorised by RBI under the Payment and Settlement Systems Act, 2007 (the Act) can issue PPI wallets for purchase of goods and services from third parties and money transfer within India. Only permitted banks can issue PPI wallets which in addition to purchase of goods and services from third parties and money transfer within India, can also be used for withdrawing cash. An updated list of entities is available on the Reserve Bank's website. Public should access the RBI website for the list of such bank and non-bank entities issuing e-wallets and pre-paid cards.

Intermediaries, like aggregators and payment gateways, which facilitate payment services, though not authorised by Reserve Bank under the Act, are however required to route their transactions only through a nodal account opened with a bank under Reserve Bank's guidelines of November 24, 2009.

**Directions, Withdrwals, Penalties & Cancelleation of Licences of Urban Co-operative Banks.**

1) **Mar 01, 2017:-** RBI imposes penalty of 5.00 lakh (Five lakh only) on The Rajsamand Urban Co-operative Bank Limited, Rajsamand.
2) **Mar 02, 2017:-** RBI extends Directions issued to Sri Bharathi Co-operative Urban Bank Ltd., Hyderabad.
3) **Mar 08, 2017:-** RBI extends Directions issued to The Vaish Co-operative Commercial Bank Ltd., New Delhi.
4) **Mar 09, 2017:-** RBI extends Directions issued to Nashik Zilla Girna Sahakari Bank Ltd., Nashik, Maharashtra.
5) **Mar 09, 2017:-** RBI issues Directions on Alwar Urban Co-operative Bank Ltd; Alwar (Rajasthan)
6) **Mar 10, 2017:-** Directions under section 35A of the Banking Regulation Act, 1949 (AACS) - The Bhilwara Mahila Urban Co-operative Bank Ltd., Bhilwara (Rajasthan)
7) **Mar 10, 2017:-** RBI extends validity of the Directions issued to the Indian Mercantile Co-operative Bank Ltd., Lucknow, UP.
8) **Mar 16, 2017:-** RBI modified Directions issued to Navodaya Urban Co-operative Bank Ltd., Nagpur, Maharashtra.
9) **Mar 16, 2017:-** RBI imposes a monetary penalty of 5 lakh (rupees Five lakh) on Transport Cooperative Bank Ltd., Indore.
10) **Mar 21, 2017:-** RBI imposes a monetary penalty of 2.00 lakh (Rupees Two Lakhs only) on Harihareshwar Sahakari Bank Ltd., Wai, Dist: Satara.
11) **Mar 26, 2017:-** Directions under Section 35A of the Banking Regulation Act, 1949 (AACS) – The R S Co-operative Bank Ltd., Mumbai, Maharashtra.
12) **Mar 29, 2017:-** Pragathi Cooperative Bank Ltd., Bengaluru, Karnataka – Penalised,a monetary penalty of 50,000/- (Rupees Fifty Thousand only)
13) **Mar 30, 2017:-** Directions under Section 35A of the Banking Regulation Act, 1949 (AACS) – Ajinkyatara Sahakari Bank Ltd., Satara, Maharashtra.
14) **Mar 30, 2017:-** Directions under Section 35A of the Banking Regulation Act, 1949 (AACS) – Shree Ganesh Sahakari Bank Ltd., Nashik, Maharashtra.
15) **Mar 31, 2017:-** RBI issues Directions to The Kapol Co-operative Bank Ltd., Mumbai.

Source: www.rbi.org.in

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ : 080-23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831-2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472-270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010